4. ಹಕ್ಕುಚ್ಯುತಿ ಪ್ರಸ್ತಾವದ ಮಂಡನೆ

ವಿಷಯ: ಚುನಾವಣಾ ಆಯುಕ್ತರು ಸದನದ ಸದಸ್ಯರ ಗೌರವಕ್ಕೆ ಹಕ್ಕುಚ್ಯುತಿ ಮಾಡಿರುವ ಬಗ್ಗೆ.

ಡಾ. ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಮಾನ್ಯ ಚುನಾವಣಾ ಆಯುಕ್ತರು ಈ ಸದನದ ಸದಸ್ಯರ ಗೌರಕ್ಕೆ ಹಕ್ಕುಚ್ಯುತಿ ತಂದ ಬಗ್ಗೆ ಈಗಾಗಲೇ ನೋಟಿಸ್ ನೀಡಿದೇನೆ. ಆದಕಾರಣ ಆ ಬಗ್ಗೆ ಪ್ರಸ್ತಾಪಿಸಲು ಅನುಮತಿ ಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಆಯಿತು, ಹೇಳಿ.

ಡಾ. ಬಗಲಿ ಸಾರ್ವಭೌಮ ಸಾತಗೌಡ : ನಿನ್ನೆಯ ದಿವಸ ಈ ಸದನದಲ್ಲಿ ಸರ್ವಾನುಮತದಿಂದ ಒಂದು ನಿರ್ಣಯವನ್ನು ಕೈಗೊಳ್ಳಲಾಗಿದೆ. ಒಂದು ವೇಳೆ 2001ರ ಜನಗಣತಿಯ ಆಧಾರದ ಮೇಲೆ ಚುನಾವಣೆಯನ್ನು ನಡೆಸಿದರೆ ಮಹಿಳೆಯರಿಗೆ, ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ತೊಂದರೆಯಾಗುತ್ತದೆ. ಅನ್ಯಾಯವಾಗುತ್ತದೆ ಎಂಬ ಹಿನ್ನಲೆಯಲ್ಲಿ ಚುನಾವಣೆಯನ್ನು ಮುಂದೂಡಬೇಕೆಂಬ ನಿರ್ಣಯವನ್ನು ಇಲ್ಲಿ ಸರ್ವಾನುಮತದಿಂದ ತೆಗೆದುಕೊಂಡಿದ್ದೇವೆ. ಇಂತಹ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದರೂ ಸಹ ಚುನಾವಣಾ ಆಯುಕ್ತರು ನಿನ್ನೆಯ ದಿವಸ ಜಿಲ್ಲಾಧಿಕಾರಿಗಳಿಗೆ ನೋಟಿಸ್ ಕಳುಹಿಸಿ, reservation ಪಟ್ಟಿಯನ್ನು ಕೊಡಬೇಕೆಂದು ಆದೇಶವನ್ನು ಮಾಡಿದ್ದಾರೆ. ಇದು ಸದನದ ನಿರ್ಧಾರಕ್ಕೆ ವ್ಯತಿರಕ್ತವಾಗಿ, ಸದನದ ಗೌರವವನ್ನು ಕಡಿಮೆ ಮಾಡುವ ಏಕ ಮಾತ್ರ ಉದ್ದೇಶದಿಂದ ಮಾಡಿರುವುದರಿಂದ ಅವರ ಮೇಲೆ ಹಕ್ಕುಚ್ಯುತಿ ಮಂಡನೆಯನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿ, ಅವರನ್ನು ಸದನಕ್ಕೆ ಕರೆಸಿ ಛೀಮಾರಿ ಹಾಕಿಸಬೇಕೆಂದು ನಾನು ನಿಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಚರ್ಚೆ ಮಾಡಿ 3 ಗಂಟೆಗೆ ತೆಗೆದುಕೊಳ್ಳೋಣ.

ಶ್ರೀ ಸಿದ್ಧರಾಮಯ್ಯ, ಮಾನ್ಯ ವಿರೋಧ ಪಕ್ಷದ ನಾಯಕರು : ಈಗಾಲೇ ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸದಸ್ಯರು ಹೇಳಿದ ಹಾಗೆ 2001ರ ಜನಗಣತಿಯ ಆಧಾರದ ಮೇಲೆ ಚುನಾವಣೆ ಮಾಡಿದರೆ ಎಸ್.ಸಿ./ಎಸ್.ಟಿ.ಗಳಿಗೆ, Backward Classes ರವರಿಗೆ ಬಹಳ ಅನ್ಯಾಯವಾಗುತ್ತದೆ. ದಯಮಾಡಿ 2011ರ ಜನಗಣತಿಯನ್ನು ಪರಿಗಣಿಸಿ ಚುನಾವಣೆ ನಡೆಸಬೇಕೆಂದು ಒತ್ತಾಯ ಮಾಡಿರುವುದನ್ನು ಆಯುಕ್ತರು, ಸದನಕ್ಕೆ ಭಂಗ ತರುವಂತಹ ರೀತಿಯಲ್ಲಿ ನಡೆದು ಕೊಂಡಿದ್ದು, ಅವರ ಮೇಲೆ ಹಕ್ಕುಚ್ಯುತಿ ಮಂಡಿಸಬೇಕೆಂದು ನಾನೂ ಕೂಡ ಸದನಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಅಭಯ ಪಾಟೀಲ್ (ಬೆಳಗಾಂ ದಕ್ಷಿಣ) : ಈಗಾಗಲೇ ಮಾನ್ಯ ಸದಸ್ಯರಾದ ಡಾ. ಬಗಲಿಯವರು ಮಂಡಿಸಿರುವ ಹಕ್ಕುಚ್ಯುತಿಯನ್ನು ನಾನು ಸಮರ್ಥನೆ ಮಾಡುತ್ತೇನೆ. ಸದನದ ನಿರ್ಣಯವನ್ನು ಗಾಳಿಗೆ ತೂರಿ ಪರಮಾಧಿಕಾರವನ್ನು ಚಲಾಯಿಸುವ ನಿಟ್ಟಿನಲ್ಲಿ ಚುನಾವಣಾ ಆಯುಕ್ತರಾದ ಶ್ರೀ ಚಿಕಮಠ್ ಅವರನ್ನು ಇಲ್ಲಿಗೆ ಕರೆಸಿ ಛೀಮಾರಿ ಹಾಕಿಸಿ, ಕಾನೂನು ಪ್ರಕಾರ ಅವರನ್ನು ಆ ಸ್ಥಾನದಿಂದ ಪಲ್ಲಟ ಮಾಡುವ ಅಧಿಕಾರ ನಮ್ಮ ಸದನಕ್ಕಿದ್ದರೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಾನೂ ಸಹ ಇದಕ್ಕೆ ಬೆಂಬಲ ವ್ಯಕ್ತಪಡಿಸುತ್ತೇನೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ); ನಿನ್ನೆಯ ದಿವಸ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು 2001ರ ಜನಗಣತಿ ಆಧಾರದ ಮೇಲೆ ಮಾಡಬಾರದು. 2011ರ ಮೀಸಲಾತಿ ಪಟ್ಟಿಯ ಆಧಾರವನ್ನಿಟ್ಟುಕೊಂಡು

ಮಾಡಬೇಕೆಂದು ಹೇಳಿ ಇಡೀ ಸದನ ಸರ್ವಾನುಮತದಿಂದ ನಿರ್ಣಯವನ್ನು ಕೈಗೊಂಡು ಅದನ್ನು ಚುನಾವಣಾ ಆಯುಕ್ತರಿಗೆ ಕಳುಹಿಸಬೇಕು, ಅವರು ಅದನ್ನು ಪುರಸ್ಕಾರ ಮಾಡಬೇಕೆಂದು ಹೇಳಿ ಸದನದ ಎಲ್ಲಾ ಸದಸ್ಯರು ಸೇರಿ ನಿರ್ಣಯವನ್ನು ಮಾಡಿ ಕಳುಹಿಸಿದರೆ, ಇವತ್ತಿನ ದಿನಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಬಂದಿರುವಂತ ಸದನದಲ್ಲಿ ನಿನ್ನೆಯ ದಿವಸ ಏನು ಈ ಬಗ್ಗೆ ತೀರ್ಮಾನ ಮಾಡಿತ್ತು. ಅದನ್ನು ಗಣನೆಗೆ ತೆಗೆದುಕೊಳ್ಳದೇ ಚುನಾವಣಾ ಆಯುಕ್ತರಾದ ಶ್ರೀ ಚಿಕ್ಕಮಠ್ ಅವರು ಏಕ ಪಕ್ಷೀಯ ನಿರ್ಧಾರವನ್ನು ತೆಗೆದುಕೊಳ್ಳುವುದರ ಜೊತೆಗೆ ಇಡೀ ಸದನವನ್ನು ನಗೆಪಾಟಲಿಗೀಡು ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ ನಮ್ಮ ಸದನದ ಹಾಗೂ ಸದಸ್ಯರ ಘನತೆಯನ್ನು ಕಾಪಾಡಬೇಕು. ಸದನದ ಸದಸ್ಯರ ಹಕ್ಕು ಮತ್ತು ಕರ್ತವ್ಯಗಳನ್ನು ತಾವು ರಕ್ಷಣೆ ಮಾಡಬೇಕು. ಸದಸ್ಯರ ಗೌರವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ತಾವು ನಮ್ಮ ರಕ್ಷಣೆಗೆ ಬರಬೇಕು. ಸದನದ ವಿರುದ್ಧವಾಗಿ ನಡೆದುಕೊಂಡಿರುವ ಚುನಾವಣಾ ಆಯುಕ್ತರನ್ನು ಸದನಕ್ಕೆ ಕರೆಸಿ, ಸಮಿತಿ ಮುಂದೆ ಹಕ್ಕುಚ್ಯುತಿ ಮಂಡಿಸಿ, ಅವರಿಗೆ ಸದನದಲ್ಲಿ ಛೀಮಾರಿ ಹಾಕಿಸಿ, ಚುನಾವಣಾ ಆಯುಕ್ತರ ಹುದ್ದೆಯಿಂದ ತೆರವುಗೊಳಿಸುವುದಕ್ಕೆ ಇಡೀ ಸದನ ಸರ್ವಾನುಮತದಿಂದ ನಿರ್ಣಯವನ್ನು ಕೈಗೊಂಡು ಸೂಕ್ತ ಶಿಸ್ತು ಕ್ರಮ ತೆಗೆದುಕೊಳ್ಳಬೇಕು. ನಿನ್ನೆ ಆಗಿರುವುದು ಇಡೀ ಸದನಕ್ಕೆ ಅಗೌರವ ತರುವಂತಹ ರೀತಿಯಲ್ಲಿ ನಡೆದುಕೊಂಡಿರುವುದರಿಂದ ಅವರ ಮೇಲೆ ಕ್ರಮ ಜರುಗಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಗೋಪಾಲ ಕೃಷ್ಣ ಬೇಳೂರು (ಸಾಗರ): ಮಾನ್ಯ ಅಧ್ಯಕ್ಷರೆ, ಸ್ಥಳೀಯ ಸಂಸ್ಥೆಗಳ ಚುನಾವಣೆಯ ಬಗ್ಗೆ ಮಾತನಾಡಿದಂತಹ ಸಂದರ್ಭದಲ್ಲಿ ಈಗಾಗಲೇ ಡಾ. ಬಗಲಿಯವರು ತಿಳಿಸಿದ್ದಾರೆ. ಬಹುಶಃ ಹಿಂದುಳಿದ ವರ್ಗ ಹಾಗೂ ಮಹಿಳೆಯರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಸದನದಲ್ಲಿ ಏನು ನಿರ್ಣಯ ತೆಗೆದುಕೊಂಡಿದ್ದಾರೆ ಅದಕ್ಕೆ ಚುನಾವಣಾ ಆಯುಕ್ತರು ಮಾಡುತ್ತಿರುವುದು ದೊಡ್ಡ ಧೋರಣೆಯಾಗಿದೆ. ಅದನ್ನು

ಖಂಡಿಸುತ್ತಿದ್ದೇವೆ. ಖಂಡಿತವಾಗಿಯೂ ಸಭೆಯಲ್ಲಿ ಏನು ತೀರ್ಮಾನವಾಗುತ್ತದೆಯೋ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಡಾ. ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ): ಕರ್ನಾಟಕ ವಿಧಾನಸಭೆಯಲ್ಲಿ ಸಂವಿಧಾನದಕ್ಕೆ ಸಂಬಂಧಪಟ್ಟಂತೆ ಮಹತ್ತರವಾದ ವಿಷಯವನ್ನು ಮಾನ್ಯ ಎಲ್ಲಾ ಸದಸ್ಯರು ಪಕ್ಷ ಭೇದ ಮರೆತು ಚರ್ಚೆಯಲ್ಲಿ ಭಾಗವಹಿಸಿ ನಿರ್ಣಯಗಳನ್ನು ಮಂಡಿಸಿ ಸರ್ವಾನುಮತದಿಂದ ಅಂಗೀಕಾರ ತೆಗೆದುಕೊಂಡ ಮೇಲೆ, ಮತ್ತೊಂದು ನಿರ್ಣಯವನ್ನು ಇಂದು ಮಾಡುತ್ತಿದ್ದಾರೆ. ಇದರ ಉದ್ದೇಶ ಮತ್ತು ಹಿನ್ನೆಲೆಯೇನೆಂದರೆ ಸಂವಿಧಾನ ಸಂಸ್ಥೆಗಳು ಜವಾಬ್ದಾರಿಯನ್ನು ನಡೆಸುವಾಗ ಅವುಗಳಿಗೆ ಅಡ್ಡ ಮಾಡಬೇಕು. ಆತಂಕ ಪಡಿಸಬೇಕು, ನಾವು ಹೇಳಿದ ಹಾಗೆಯೇ ನಡೆಯಬೇಕು ಎಂದೇನಿಲ್ಲ. ಸ್ಥಳೀಯ ಸಂಸ್ಥೆಗಳು ತನ್ನ ಅವಧಿ ಮುಗಿದ ಮೇಲೆ ಸರಿಯಾದ ಸಮಯಕ್ಕೆ ಚುನಾವಣೆ ನಡೆಸಬೇಕಾದುದು ಸಂವಿಧಾನಬದ್ಧವಾಗಿಅವರ ಜವಾಬ್ದಾರಿಮತ್ತು ಹೊಣೆಗಾರಿಕೆಯಾಗಿರುತ್ತದೆ. ಅದೇ ರೀತಿಯಲ್ಲಿ 10 ವರ್ಷದ ಹಿಂದೆ 8 ವರ್ಷ ವಯೋಮಾನವಾಗಿರುವ ಒಂದು ಮಗು 10 ವರ್ಷದ ನಂತರ 18 ವರ್ಷಕ್ಕೆ ಕಾಲಿಟ್ಟ ಮೇಲೆ ಅವನಿಗೆ ವೋಟಿನ ಹಕ್ಕು ಬಂದಿದೆ. Vote ಮಾಡುವುದು ಸಂವಿಧಾನದ ಬದ್ಧವಾದ ಹಕ್ಕು. 10 ವರ್ಷಗಳಿಗೊಮ್ಮೆ census ಮಾಡಿದಾಗ, ಅಲ್ಲಿಯ ಜನಸಂಖ್ಯೆ ಸಹಜವಾಗಿ ಹೆಚ್ಚಾದಾಗ, ಎಸ್.ಸಿ/ಎಸ್.ಟಿ. ಜನಸಂಖ್ಯೆ ಸಹ 10 ವರ್ಷಕ್ಕೆ ಹೆಚ್ಚಾಗಿರುತ್ತದೆ.

ಪ್ರತಿ 10 ವರ್ಷಕ್ಕೊಮ್ಮೆ census ಮಾಡಿ ಜನಪ್ರಾತಿನಿಧ್ಯದ ಕ್ಷೇತ್ರಗಳಲ್ಲಿ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡುವಾಗ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಕೊಡಬೇಕು ಎನ್ನುವುದು ಕೂಡ ರಾಜ್ಯಾಂಗ ಬದ್ಧವಾದ ವಿಷಯ. ಈ ಪ್ರಮುಖವಾದಂಥ ರಾಜ್ಯಾಂಗ ವಿಷಯಗಳನ್ನು ಚರ್ಚೆ ಮಾಡುವಾಗ ನಾವು ಒಬ್ಬರಿಗೊಬ್ಬರು ಸಂಘರ್ಷಕ್ಕೆ ಇಳಿಯದೆ ರಾಜ್ಯಾಂಗದ ಆಶಯಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳದೆ ನಾವು ಈ ಒಂದು

ಸಮಸ್ಯೆಯನ್ನು ಕುಳಿತು ಚರ್ಚೆ ಮಾಡಿ ಇದಕ್ಕೆ ಸೂಕ್ತವಾದಂಥ ಅವಕಾಶಗಳನ್ನು ಈ ಮೂರು ವಿಷಯಗಳಿಗೆ ಮಾನ್ಯತೆಯನ್ನು ಕೊಟ್ಟು ಚುನಾವಣೆಯನ್ನು ನಡೆಸಬೇಕು. ಅದಕ್ಕೆ ರಾಜ್ಯದ ಚುನಾವಣಾ ಆಯೋಗ ತನ್ನ ಸಂವಿಧಾನಿಕ ಜವಾಬ್ದಾರಿಯನ್ನು ನಡೆಸತಕ್ಕಂಥ ಕೆಲಸಕ್ಕೆ ಕೈ ಹಾಕಿದರೂ, ಈಗ ಮಾರ್ಚ್, ಏಪ್ರಿಲ್‌ನಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಪ್ರಾರಂಭವಾಗುತ್ತಿದೆ. The role of Teacher is very vital in conducting exams and also in holding elections. Election ಗೆ ಹೋದರೆ ಮಕ್ಕಳ ಭವಿಷ್ಯ ಹೋಗುತ್ತದೆ. ಮಕ್ಕಳ ಭವಿಷ್ಯ ಬದಿಗಿಟ್ಟರೆ, election ನಡೆಸಬೇಕು ಎಂದರೆ ರಾಜ್ಯಾಂಗ ಬದ್ಧವಾಗಿ ಏನು ಮೀಸಲಾತಿ ಇರಬಹುದು. ವೋಟಿನ ಹಕ್ಕು ಇರಬಹುದು, ಮತ್ತು ಮಹಿಳಾ ಮೀಸಲಾತಿ ಇರಬಹುದು, ಇದಕ್ಕೆ ನಾವು ಚ್ಯುತಿಯನ್ನು ಅಥವಾ ಅವಕಾಶವನ್ನು ನಿರಾಕರಣೆ ಮಾಡಿದ ಹಾಗೆ ಆಗುತ್ತದೆ. ಹೊರಗಡೆ ಇದನ್ನು ಚರ್ಚೆ ಮಾಡುವ ಎಲ್ಲಾ ಪಾರ್ಟಿಯವರಿಗೂ election ಬೇಕಾಗಿಲ್ಲ. Assembly election ಬರುತ್ತಾ ಇದೆ. Assembly election ಆದ ಮೇಲೆ ಸ್ಥಳೀಯ ಸಂಸ್ಥೆಗಳ election ಮಾಡಲಿ ಎಂಬ ಉದ್ದೇಶ ಇದೆ. ಅದಕ್ಕೆ ಈಗ ಮಾಡಿಬಿಟ್ಟರೆ ಗೊಂದಲ ಆಗುತ್ತದೆ. ಗುಂಪು ಆಗುತ್ತದೆ. ಕಾರ್ಯಕರ್ತರು ಚದುರಿ ಹೋಗುತ್ತಾರೆಂದು ಅವರದೇ ಆದಂಥ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದರೂ ಕೂಡ ರಾಜ್ಯಾಂಗ ಬದ್ಧವಾದಂಥ ಹಕ್ಕುಗಳ ಜಾರಿ ಮಾಡುವಲ್ಲಿ ನಿರಾಕರಣೆ ಅಗತಕ್ಕ ಉದ್ದೇಶ ಮತ್ತು ಹಿನ್ನೆಲೆ ಇರುವುದರಿಂದ ಇವತ್ತು ಡಾ.ಬಗಲಿ ಅವರು ತಂದಿರತಕ್ಕಂಥ ಹಕ್ಕುಚ್ಯುತ ನಿರ್ಣಯ ಏನಿದೆ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತಾ, ಚುನಾವಣಾ ಆಯೋಗವನ್ನು ಕರೆದು ಛೀಮಾರಿ ಹಾಕಬೇಕು ಎನ್ನುವ ಯಾವುದೇ ಉದ್ದೇಶ ಈ ಸದನಕ್ಕೆ ಇಲ್ಲದೆ ಇದ್ದರೂ, ಸರ್ಕಾರ ಅವರ ಜೊತೆಯಲ್ಲಿ ಸಂವಾದ ನಡೆಸಿ ರಾಜ್ಯಾಂಗದ ಹಕ್ಕುಗಳ ಜಾರಿಯಲ್ಲಿರತಕ್ಕಂಥ ವಿಷಯಗಳನ್ನು ಅವರ ಗಮನಕ್ಕೆ ತರುತ್ತಾ ಮೀಸಲಾತಿಯನ್ನು ಒದಗಿಸತಕ್ಕಂಥದ್ದು, ಚುನಾವಣೆಯಲ್ಲಿ ಮತ ಚಲಾಯಿಸತಕ್ಕಂಥ ಅವರ ಹಕ್ಕನ್ನು ಮೊಟಕುಗೊಳಿಸದಂಥ ಜವಾಬ್ದಾರಿ

ಹಾಗೂ ಕರ್ತವ್ಯ ಚುನಾವಣಾ ಆಯೋಗದ ಮೇಲೆ ಇರುವುದರಿಂದ ಈ ಚುನಾವಣೆಯನ್ನು ತರಾತುರಿಯಲ್ಲಿ ಮಾಡದೆ ರಾಜ್ಯಾಂಗದ ಹಕ್ಕುಗಳ ನಿರಾಕರಣೆ ಮಾಡದ ರೀತಿಯಲ್ಲಿ ಈ ಒಂದು ಸರ್ಕಾರ ಅವರನ್ನು ಕರೆಸಿ ಸಂವಾದ ನಡೆಸಿ ರಾಜ್ಯಾಂಗದ ಆಶಯಕ್ಕೆ ಅನುಗುಣವಾಗಿ ಮತ್ತು ಮಕ್ಕಳ ಭವಿಷ್ಯಕ್ಕೆ ತೊಡಕು ಆಗದ ರೀತಿಯಲ್ಲಿ ಈ ಚುನಾವಣೆಗಳನ್ನು ಸೂಕ್ತವಾದಂಥ ಸಮಯದಲ್ಲಿ ಯಶಸ್ವಿಯಾಗಿ, ರಾಜ್ಯಾಂಗದ ಹಕ್ಕುಗಳು ಯಾರು ಯಾರಿಗೆ ಸಲ್ಲಬೇಕು ಅವರಿಗೆ ತಲುಪುವಂಥ ರೀತಿಯಲ್ಲಿ ಚುನಾವಣೆ ನಡೆಸಲಿಕ್ಕೆ ಅವರ ಜೊತೆಯಲ್ಲಿ ಕೂಡಲೇ ಸರ್ಕಾರ ಚರ್ಚೆಯನ್ನು ಪ್ರಾರಂಭ ಮಾಡಿ ಅದಕ್ಕೆ ಸೂಕ್ತವಾದಂಥ ತೀರ್ಮಾನವನ್ನು ಕೈಗೊಳ್ಳಬೇಕು. ಅದಕ್ಕೆ ಇಡೀ ಸದನ ಬೆಂಬಲವನ್ನು ವ್ಯಕ್ತ ಮಾಡುತ್ತದೆ. ಈ ಸದನದಲ್ಲಿ ಪ್ರತಿಯೊಬ್ಬ ಸದಸ್ಯರೂ ಮೀಸಲಾತಿ ಪರವಾಗಿ, ಹಕ್ಕಿನ ಪರವಾಗಿ ಮಾತನಾಡುತ್ತಿರುವುದು ನಿಜವಾಗಿಯೂ ನನಗೆ ಸಂತೋಷವಾಗುತ್ತಿದೆ. ಈ ತರಹದ ರಾಜಕೀಯ ನಿರ್ಧಾರ ಎಲ್ಲಾ ವಿಭಾಗಗಳಿಗೂ ವಿಸ್ತರಿಸಲಿ ಎಂದು ಆಶಿಸಿ, ಈ ಒಂದು ಚುನಾವಣೆಯನ್ನು ಸೂಕ್ತವಾದ ಸಮಯದಲ್ಲಿ ನಡೆಸಲು ಚುನಾವಣಾ ಆಯೋಗವನ್ನು ಕರೆಸಿ, ಅವರಿಗೆ ಸೂಕ್ತವಾದಂಥ ಮಾರ್ಗದರ್ಶನವನ್ನು, ಸಲಹೆಯನ್ನು ಪಡೆದು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆಗಳನ್ನು ಸೂಕ್ತವಾದಂಥ ಸಮಯದಲ್ಲಿ ನಡೆಸಬೇಕೆಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಡಾ: ಸಾರ್ವಭೌಮ ಸಾತಗೌಡ ಬಗಲಿ: ಪುನರ್ ಪರಿಶೀಲನಾ ಅರ್ಜಿ ಸುಪ್ರೀಂ ಕೋರ್ಟ್ ಮುಂದೆ ಇರುವಾಗ ಈ ರೀತಿಯಾದ ಒಂದು ನಿರ್ಧಾರವನ್ನು ಚುನಾವಣಾ ಆಯುಕ್ತರು ತೆಗೆದುಕೊಳ್ಳುವುದು ತಪ್ಪಾಗುತ್ತದೆ. ಏಕೆಂದರೆ, ಚುನಾವಣಾ ಆಯಕ್ತರು ನಾನು ಚುನಾವಣೆ ನಡೆಸದೆ ಇದ್ದರೆ ಸುಪ್ರೀಂ ಕೋರ್ಟ್ ನೀಡಿದ ಆದೇಶವನ್ನು ಉಲ್ಲಂಘಿಸಿದಂತೆ ಆಗುತ್ತದೆ ಎನ್ನುವಂಥ ಕುಂಟು ನೆಪವನ್ನು ಹೇಳುತ್ತಿದ್ದಾರೆ. ಆದರೆ, ಯಾವಾಗ ನಮ್ಮ Review petition is pending before the Supreme Court ಈ

ರೀತಿಯ ಯಾವುದೇ ಆತಂಕಗಳು ಅವರಿಗೆ ಇಲ್ಲ. ನಮ್ಮ ಸದನಕ್ಕೆ ಅಗೌರವ ತೋರುವಂಥ ಉದೇಶದಿಂದ ಅವರು ಇಷ್ಟೊಂದು ಉದ್ಧಟತನದಿಂದ ನಡೆದುಕೊಳ್ಳುತ್ತಿದ್ದಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಡಾ. ಬಗಲಿಯವರು ಎತ್ತಿರುವಂಥ ವಿಷಯವನ್ನು, ಅಭಿಪ್ರಾಯಗಳನ್ನು ನಾನು ಕೂಡ ಮುಂದುವರೆಸುತ್ತಾ, ಇಲ್ಲಿ 2001ರ ಜನಗಣತಿ ಆಧಾರದ ಮೇಲೆ ಮೀಸಲಾತಿ ನಿಗದಿಯಾಗಿದೆ ಎಂದು ಹೇಳಬಯಸುತ್ತೇನೆ. ಸರ್ಕಾರ 2011ರ ಜನಗಣತಿ ಆಧಾರದ ಮೇಲೆ ಪರಿಶಿಷ್ಟ ಜಾತಿ ವರ್ಗದವರು, ಹಿಂದುಳಿದ ವರ್ಗದವರು ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ಕೊಡಬೇಕೆಂಬ ದೃಷ್ಟಿಯಿಂದ ನಾವು ಚುನಾವಣೆಯನ್ನು ನಡೆಸಬೇಕಾಗಿದೆಯೆಂದು ಹೇಳಿದೆ. ಸರ್ಕಾರ ಚುನಾವಣೆಯನ್ನು ಮುಂದೂಡಬೇಕೆಂದು ಎಲ್ಲೂ ಕೂಡ ಹೇಳಿಲ್ಲ. ಆದರೆ ನಮಗೆ ಮೀಸಲಾತಿಯನ್ನು ನಿಗದಿ ಮಾಡುವುದಕ್ಕೆ 15 ದಿನ ಕಾಲಾವಕಾಶ ಬೇಕೆಂದು ಸರ್ಕಾರ ಈ ಮೂಲಕ ಕೇಳಿಕೊಂಡಿದೆ. ನಿನ್ನೆ ನಾವು ವಿಧಾನಸಭೆಯಲ್ಲಿ ಮಾಡಿರತಕ್ಕಂಥ ನಿರ್ಣಯದಲ್ಲಿ ಕೂಡ ಚುನಾವಣೆ ಬೇಡವೆಂದು ಎಲ್ಲಿಯೂ ಹೇಳಿಲ್ಲ. ಎಂದಾದರೂ ಒಂದು ದಿನ ಚುನಾವಣೆ ನಡೆಯಲೇ ಬೇಕು. ಆದರೆ ಸ್ವಲ್ಪ ಕಾಲ ಮುಂದಕ್ಕೆ ಹಾಕಿ ಎಂದು ಹೇಳಿದೆ. ಆದ್ದರಿಂದ ಇಲ್ಲಿ ಸಾಮಾಜಿಕ ನ್ಯಾಯ ದೊರಕಬೇಕೆಂದು ಇದ್ದರೆ 2001ಕ್ಕೂ 2011ಕ್ಕೂ ಪರಿಶಿಷ್ಟ ಜಾತಿ, ಹಿಂದುಳಿದವರು ಎಲ್ಲಾ ಜನಸಂಖ್ಯೆ ಕೂಡ ಹೆಚ್ಚಾಗಿರುತ್ತದೆ. ಅಲ್ಲಿಗೆ ಸ್ಥಾನಗಳ ಸಂಖ್ಯೆ ಕೂಡ ಹೆಚ್ಚಾಗುತ್ತದೆ. ಮೊನ್ನೆ ತಾನೇ ವಿಧಾನಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಿ, ಮಹಿಳೆಯರಿಗೆ ಶೇಕಡ 50 ರಷ್ಟು ಮೀಸಲಾತಿ ಕೊಡಬೇಕೆಂದು ನಿರ್ಣಯವನ್ನು ಮಾಡಿದ್ದೇವೆ. ಇಲ್ಲಿ 2011ನ್ನು ಗಣನೆಗೆ ತೆಗೆದುಕೊಳ್ಳದೆ ಹೋದರೆ ಮಹಿಳೆಯರಿಗೂ ಕೂಡ ಹಕ್ಕನ್ನು ನಾವು ನಿರಾಕರಿಸಿದಂತೆ ಆಗುತ್ತದೆ. ಆದ್ದರಿಂದ ರಾಜ್ಯಾಂಗದ ಆಶಯ, ಜನರ ಆಶಯ, ಮತ್ತು ನಮ್ಮ ನಿರ್ದಿಷ್ಟ ವರ್ಗಗಳ ಆಶಯ ಕೂಡ ರಾಜಕೀಯ ಹಕ್ಕನ್ನು ಪ್ರತಿಪಾದಿಸುವಂಥ

ನಿರ್ಣಯವನ್ನು ಮಾಡಬೇಕಾಗಿರುವುದರಿಂದ ಇವತ್ತು ಚುನಾವಣಾ ಆಯೋಗ ಇದನ್ನು ಹಟವಾಗಿ ತೆಗೆದುಕೊಳ್ಳದೆ, ಡಾ. ಬಗಲಿಯವರು ಹೇಳಿದ ಹಾಗೆ ಸುಪ್ರೀಂ ಕೋರ್ಟ್‌ನಲ್ಲಿ ಪರಿಶೀಲನಾ ಅರ್ಜಿ ವಿಲೆ ಆಗಬೇಕಾಗಿರುವುದರಿಂದ, ಇದೆಲ್ಲಾ ಪರಿಗಣಿಸಿ ಯಾವುದೇ ಘರ್ಷಣೆಗೆ ಅವಕಾಶ ಮಾಡಿಕೊಡದ ಹಾಗೆ ಚುನಾವಣಾ ಆಯೋಗದೊಂದಿಗೆ ಸರ್ಕಾರ ಮತ್ತೊಮ್ಮೆ ಮಾತನಾಡಿ, ಈ ಚುನಾವಣೆ ಕಾಲವನ್ನು ಸ್ವಲ್ಪ ಮುಂದಕ್ಕೆ ಹಾಕಿ ಎಲ್ಲರಿಗೂ ಅನುಕೂಲ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಬೇರೆ ರಾಜ್ಯಗಳಲ್ಲಿಯೂ ಕೂಡ ಚುನಾವಣಾ ಪ್ರಕ್ರಿಯೆ ಮುಂದೆ ಹೋಗಿರುವ ಪ್ರಕರಣಗಳು ಇವೆ. ಇದು ಹೊಸದಲ್ಲ. ಕರ್ನಾಟಕ ಸರ್ಕಾರ ಹೊಸದಾಗಿ ಮಾಡುತ್ತಿಲ್ಲ. ಆ ನಿಟ್ಟಿನಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಸಭಾಧ್ಯಕ್ಷರೆ, ನಿನ್ನೆ ನಾವು ಸರ್ವಾನುಮತದ ಒಂದು ನಿರ್ಣಯವನ್ನೂ ಕೂಡ ಮಾಡಿದ್ದೇವೆ. ಈ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲೇಬೇಕು ಎಂಬುದು ಸರ್ಕಾರದ ಇಚ್ಚೆಯಾಗಿದೆ. ಈ ಸದನದಲ್ಲಿರತಕ್ಕಂಥ ಎಲ್ಲಾ ಪಕ್ಷಕ್ಕೆ ಸೇರಿದವರ ಸದಸ್ಯರ ಅಭಿಪ್ರಾಯ ಕೂಡ ಆಗಿದೆ. ಆದರೆ ನ್ಯಾಯಯುತವಾಗಿ ಇರತಕ್ಕಂಥ ರೀತಿಯಲ್ಲಿ ಒಂದು ಒಳ್ಳೆಯ ವಾತಾವರಣದ ಹಿನ್ನೆಲೆಯಲ್ಲಿ ಎಲ್ಲಾ ವರ್ಗದವರನ್ನು ಕೂಡ ನ್ಯಾಯ ಸಿಗತಕ್ಕಂಥ ರೀತಿಯಲ್ಲಿ, ಪ್ರಾತಿನಿಧ್ಯತೆ ಸಿಗುವಂಥ ರೀತಿಯಲ್ಲಿ ಚುನಾವಣೆ ಆಗಬೇಕು ಎನ್ನತಕ್ಕಂಥದ್ದು ಎಲ್ಲರ ಚಿಂತನೆ. ಹಾಗಾಗಿ ಸದನವು ಒಂದು ನಿರ್ಣಯವನ್ನು ಮಾಡಿತು. ನಿರ್ಣಯವನ್ನು ಮಾಡಿದ್ದು ಹೋಗಿ ತಲುಪಿದ ಕೆಲವು ಕ್ಷಣದಲ್ಲೇ ಏಳನೇ ತಾರೀಖಿನೊಳಗಾಗಿ 2007 ರ reservation ಅನ್ನು ಆಧಾರವಾಗಿ ಇಟ್ಟುಕೊಂಡು ಚುನಾವಣೆಗೆ ಸಿದ್ಧತೆಯನ್ನು ಮಾಡಿ ಎಂದು ಜಿಲ್ಲಾಧಿಕಾರಿಗಳಿಗೆ ಆದೇಶ ಹೋಗುತ್ತದೆ. ಇಲ್ಲಿ ಪ್ರಶ್ನೆ ಅಡಗಿರುವಂಥದ್ದು ಸಭೆ ಸರ್ವಾನುಮತದಿಂದ ನಿರ್ಣಯವನ್ನು ಮಾಡಿದಂಥ ಸಂದರ್ಭದಲ್ಲಿ ನಾವೇನೂ ಸುಮ್ಮನೆ ಇಲ್ಲಿ ಕುಳಿತುಕೊಂಡು, ಬೀದಿಯಲ್ಲಿ ಕುಳಿತುಕೊಂಡು

ನಿರ್ಣಯವನ್ನು ಮಾಡುತ್ತಿಲ್ಲ. ಸಂವಿಧಾನ ಅಡಿಯಲ್ಲಿ ಈ ಮನೆ ಇರತಕ್ಕಂಥದ್ದು, ಸದಸ್ಯರ ಹಕ್ಕು. Article 194 ನಲ್ಲಿ Powers, privileges etc., of the House of Legislature and of the Members and Committees thereof. ಅದನ್ನೆಲ್ಲಾ ಮತ್ತೆ ಓದಿ ಹೇಳುವಂಥ ಅವಶ್ಯಕತೆ ಇಲ್ಲ., ಸಂವಿಧಾನದ ಚೌಕಟ್ಟಿನಲ್ಲಿ Article 194 ಪ್ರಕಾರ ಇವತ್ತು ಸದನದ ಸದಸ್ಯರೆಲ್ಲರೂ ಕೂಡ ಸದನದಲ್ಲಿ ಒಂದು ಸರ್ವಾನುಮತದ ತೀರ್ಮಾನವನ್ನು ಮಾಡಿದಂಥ ಸಂದರ್ಭದಲ್ಲಿ ಅದನ್ನು ಕ್ಷಣ ಮಾತ್ರದಲ್ಲಿ ಧಿಕ್ಕರಿಸುವಂಥ ಕೆಲಸ ಆಗಿದೆ ಎಂದರೆ, ಅದನ್ನು ಮಾಡಿರತಕ್ಕಂಥವರು ಯಾರು? ಸರ್ಕಾರ ನೇಮಿಸಿದಂಥ ಚುನಾವಣೆ ಆಯೋಗ he is a civil servant, he was an IAS officer, he was appointed as an Election Commissioner. He has to look after the election activities on behalf of the government. ಆದರೆ ಚುನಾವಣೆ ಮಾಡಬೇಕೆಂಬ ಪ್ರಶ್ನೆ ಬಂದಾಗ ಏಕಪಕ್ಷೀಯವಾಗಿ ಸರ್ಕಾರದ ಅಭಿಪ್ರಾಯ ಏನು ಎಂದು ತಿಳಿಯದೆ ಚುನಾವಣೆ ಮಾಡಬೇಕೆಂದು ಹೇಳಿರುವ ರೀತಿಯಲ್ಲಿ ಹೋಗುವುದು ಸರಿಯೇ?

ಹಿಂದೆಲ್ಲಾ ಅದು ಏನೇ ಆಗಿರಲಿ, ಅವರು ಸಂವಿಧಾನದಲ್ಲಿ ನನ್ನ ಹಕ್ಕು ಚ್ಯುತಿಯಾಗುತ್ತದೆ. Contempt ಆಗುತ್ತದೆ ಎನ್ನುವ ರೀತಿಯಲ್ಲಿ ಹೋಗಿರಬಹುದು. ಆದರೆ ಸದನ ಒಂದು ನಿರ್ಣಯವನ್ನು ತೆಗೆದುಕೊಂಡು ಸಂದರ್ಭದಲ್ಲಿ ಅದನ್ನು ಧಿಕ್ಕರಿಸುವಂಥ ಅಧಿಕಾರ ಅವರಿಗೆ ಇದೆಯೇ? It is a fight between political bosses and the civil servants. ಇದನ್ನು ನಾವು ಇವತ್ತು ಯೋಚನೆ ಮಾಡಬೇಕಾಗುತ್ತದೆ. ಯಾವುದೇ ಸಂದರ್ಭದಲ್ಲಿಯೂ ಕೂಡ civil servant ಆಗಿವುಂಥವರು ಕೊನೇ ಪಕ್ಷ ಈ ರೀತಿಯಾಗಿ ಆಗಿದೆ ಎನ್ನುವುದನ್ನು ಬಂದು ತಮ್ಮನ್ನು ಭೇಟಿ ಮಾಡುವ ಅವಶ್ಯಕತೆಯಿತ್ತು. ಸದನವನ್ನು ನೋಡಬೇಕಾಗಿತ್ತು. ಯಾರೂ ಇಲ್ಲದೇ ಇದ್ದರೂ ಕೂಡ ತಮ್ಮನ್ನಾದರೂ ನೋಡಬೇಕಾಗಿತ್ತು. ಇವತ್ತು ಈ ರೀತಿ

ಆಗಿರುವುದನ್ನು ನೋಡಿದಾಗ ಹೊರಗಡೆ ಇರುವಂಥ ಜನ ಏನು ಮಾತನಾಡುತ್ತಾರೆ? ಈ ಮನೆಯ ಸಾರ್ವಭೌಮತೆ ಏನಾಯಿತು? ಸಾರ್ವಭೌಮತೆ ಆಯಿತು ಎಂದಾಗ ಇದಕ್ಕೇನೂ ಹಕ್ಕಿಲ್ಲವೇ? ಜವಾಬ್ದಾರಿಕೆ ಇಲ್ಲವೇ? ಕರ್ತವ್ಯ ಇಲ್ಲವೇ? ಇದೆ. ಸಂವಿಧಾನದಡಿಯಲ್ಲಿ ಚುನಾವಣೆ ನಡೆಸುವ ಜವಾಬ್ದಾರಿಕೆ ಕೂಡ ಸರ್ಕಾರಕ್ಕಿದೆ. ಸಂವಿಧಾನವನ್ನು ರಕ್ಷಣೆ ಮಾಡುವ ಜವಾಬ್ದಾರಿಕೆ ನಿಮ್ಮ ಮೇಲಿದೆ. ಹೀಗಾಗಿ ಈ ಜಗಳ ಬಂದಿರುವುದನ್ನು ಬಗೆಹರಿಸಬೇಕು. ಮಾನ್ಯ ಅಧ್ಯಕ್ಷರೆ, ನಾನು ಅಭಿಪ್ರಾಯ ಪಡುವುದೇನೆಂದರೆ, ಇನ್ನೂ ಅವರು ಜಿಲ್ಲಾಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. 7ನೇ ತಾರೀಖು ಅಂದರೆ ನಾಳೆವರೆಗಾಗಿ ಚುನಾವಣೆಗೆ ಸಿದ್ಧತೆಗಳನ್ನು ಮಾಡಿ ಎನ್ನುವಂಥ ಸಂದೇಶ ರವಾನೆಯಾಗಿದೆ. ಇನ್ನೂ ನಾಳೆವರೆಗಾಗಿ ಅವಕಾಶವಿದೆ. ನಾನು ಒಂದು ಮಾತನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಹೌದು suo-motu in his own wisdom he has taken a decision to oblige the court order. Court order ಅನ್ನು obligeಮಾಡಿದ್ದೇನೆಂದು ಹೇಳಿಕೊಳ್ಳಬಹುದು. ಆದರೆ, ಇವತ್ತು ಸದನ ಮಾಡಿದಂಥ ಸರ್ವಾನುಮತದ ನಿರ್ಣಯಕ್ಕೆ ಧಿಕ್ಕರಿಸುವಂಥ ಪ್ರಶ್ನೆ ಇತ್ತೇ? ಕೊನೆ ಪಕ್ಷ ಅವರ ಜವಾಬ್ದಾರಿ ಹೋಯಿತೇ? ಇವತ್ತು ಬಂದು ಹೇಳಬಹುದಾಗಿತ್ತು. Yes ಸಂವಿಧಾನದ ಚೌಕಟ್ಟಿನಲ್ಲಿ ನನ್ನ ಕರ್ತವ್ಯ ನಾನು ಮಾಡಿದ್ದೇನೆ. ಚುನಾವಣೆಯನ್ನು ಮಾಡಬೇಕಾದರೆ ಸರ್ಕಾರ ಮಾಡಬೇಕು. ಸರ್ಕಾರದ ಸಹಮತಿಯಿಲ್ಲದೇ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎನ್ನುವಂಥ ರೀತಿಯಲ್ಲಿ ಅವರು ಬಂದು ತಮ್ಮನ್ನು ಭೇಟಿಯಾಗುವಂಥ ಕೆಲಸವನ್ನಾದರೂ ಮಾಡಬೇಕಾಗಿತ್ತು. ಇವತ್ತು ಅವರ ನಡವಳಿಕೆಯಿಂದ ಒಂದು ಸಂಘರ್ಷಕ್ಕೆ ಎಡೆ ಮಾಡಿ ಕೊಟ್ಟಿದ್ದಾರೆ. ಸೌಜನ್ಯಕ್ಕಾದರೂ ಕೂಡಾ ಸಭಾಧ್ಯಕ್ಷರನ್ನು ಭೇಟಿ ಮಾಡುವ ಕೆಲಸ ಮಾಡಲಿಲ್ಲವೆಂದರೆ ಏನರ್ಥ? ಸಂವಿಧಾನವನ್ನು ರಕ್ಷಣೆ ಮಾಡುವುದಕ್ಕೋಸ್ಕರ ನೀವು ಕುಳಿತಿರುವುದು. ಅದರ ಜವಾಬ್ದಾರಿಕೆ ನಿಮಗೇ ಇದೆ. ಅಧ್ಯಕ್ಷರೇ, ನಾನು ಈ ಎಲ್ಲಾ ವಿಚಾರಗಳನ್ನು ನಿಮಗೆ ಹೇಳಬೇಕಾಗಿಲ್ಲ. ಒಂದೇ ಒಂದು ವಿಚಾರವನ್ನು ಈ

ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. Kaul and Shakdher page No. 291ನಲ್ಲಿ, Disobedience of orders of the House or its Committes ನಲ್ಲಿ ಈ ರೀತಿ ಹೇಳಲಾಗಿದೆ. Disobedience to the orders of the House, whether such orders are of general application or require a particular individual to do or abstain from doing a particular act is a contempt of the House. Disobedience to the orders of a Committee of the House is treated as a contempt of the House itself, provided the order disobeyed is within the scope of the Committee's authority. To prevent, delay, obstruct, interfere with the exectution of the orders of the House or a Committee thereof is also contempt of the House. Examples of contempt are, refusal or neglect of a witness or any other person, summoned to attend the House or a Committee thereof, to attend; neglecting or refusing to withdraw from the House when directed to do so, ಈಗಾಗಲೇ ನಾನು ಅಭಿಪ್ರಾಯಪಟ್ಟ ಪ್ರಕಾರ ಏನಾಯಿತು ಎಂದು ಕೇಳುವ ಸೌಜನ್ಯವಾದರೂ ಇರಬೇಕಾಗಿತ್ತು. ಏಕ ಪಕ್ಷೀಯವಾಗಿ ಈ ರೀತಿ ತೀರ್ಮಾನ ಮಾಡಿದ್ದಾರೆಂದರೆ ಸಾರ್ವಭೌಮತೆಗೆ ಧಕ್ಕೆ ಬರಲಿಲ್ಲವೇ? ಇದು ಕರ್ನಾಟದಲ್ಲಿ ಮಾತ್ರ ಆಗಿದೆಯೇ? ದೇಶದಲ್ಲಿ ಎಲ್ಲಿಯಾದರೂ ಆಗಿದೆಯೇ ಎಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಂಥ ಸಂಘರ್ಷಗಳು ಬೇರೆ ಬೇರೆ ರಾಜ್ಯದಲ್ಲೂ ಕೂಡಾ ಆಗಿದೆ. ಆಂಧ್ರ ಪ್ರದೇಶ ಮತ್ತು ಉತ್ತರಪ್ರದೇಶದಲ್ಲಿ 2011ರ ಜನಗಣತಿಯ ಪ್ರಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಆಗಬೇಕೆಂದು ಆ ರಾಜ್ಯಗಳು ನಿರ್ಣಯ ಮಾಡಿ ತೀರ್ಮಾನ ಮಾಡಿ ಚುನಾವಣೆಗಳನ್ನು ಮುಂದೂಡಿರುವಂಥ ನಿದರ್ಶನಗಳು ಇದೆ. ನಮಗೆ ಅನ್ವಯವಾಗುವಂಥ ಸಂವಿಧಾನವೂ ಒಂದೇ, ಆಂಧ್ರ

ಪ್ರದೇಶಕ್ಕೂ ಒಂದೇ, ಉತ್ತರ ಪ್ರದೇಶಕ್ಕೂ ಒಂದೇ. ಸಂವಿಧಾನದ ಒಂದೇ ಇದ್ದಂಥ ಸಂದರ್ಭದಲ್ಲಿ ಆಚರಿಸುವಂಥ ಸಂದರ್ಭದಲ್ಲಿ ಒಂದು ರಾಜ್ಯದಲ್ಲಿ ಒಂದು ತರಹ, ಇನ್ನೊಂದು ರಾಜ್ಯದಲ್ಲಿ ಇನ್ನೊಂದು ತರಹ ಆಚರಣೆಯಾಯಿತು ಎಂದು ಹೇಳಿದಾಗ, ಏಕೆ ಈ ರೀತಿ ಆಯಿತು? ಈ ಸಂಘರ್ಷಕ್ಕೆ ಕಾರಣವೇನು? ನಾನು ಈಗಾಗಲೇ ಹೇಳಿದ ರೀತಿಯಲ್ಲಿ ಸಂಘರ್ಷಕ್ಕೆ ಕಾರಣವೇನೆಂದರೆ, it is an egoism. ಏಕೆ ಅವರ ಮಾತನ್ನು ಕೇಳಬೇಕು? ಒಬ್ಬ civil servant, can he go against the wish and will of this House? Is it not contempt? He is refusing to act ಎನ್ನುವ ಕಾರಣಕ್ಕೆ. ಅಲ್ಲಿಂದ ನಿರ್ಣಯ ಹೋದ ಕ್ಷಣ ಮಾತ್ರದಲ್ಲಿ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡುತ್ತಾರೆಂದರೆ ನಮ್ಮನ್ನು ಯಾವ ಲೆಕ್ಕಕ್ಕೂ ಇಟ್ಟುಕೊಂಡಿಲ್ಲ. ಚುನಾವಣೆ ಆಯುಕ್ತರ ಹುದ್ದೆಗೆ ಗೌರವಿದೆ. ಗೌರವವನ್ನು ಕೊಡುತ್ತೇವೆ. ಆದರೆ, ನಡವಳಿಕೆಯನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ನಾನು ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಏಪ್ರಿಲ್-02-2008: Sending Nand Lal to jail is outcome of clash of egos between civil service and political leadership during which both removed the big leaf. Maharashtra Legislature created history on March 27 by sending a constitutional officer, state's chief electoral Officer, Nand Lal, to jail, for committing breach of privilege of the House. This unpleasant incident has all makings of as fight between the Sovererеign Legislature and an autonomous Election Commission. A delegation of chief Electoral officers from different states is to call on the president of India shortly. That is a different thing. ಅಂದರೆ there are incidences in this Country. Similar situations have also arisen in other States. How the other Governments have behaved? How the

Governments have taken a decision? ಆದ್ದರಿಂದ ಅಧ್ಯಕ್ಷರೆ, ಇವತ್ತು ನಾನು ಹೇಳುತ್ತಿದ್ದೇನೆ, ಇವತ್ತು ಸಂವಿಧಾನದ ಸಾರ್ವಭೌಮತೆಯನ್ನು ಪ್ರಶ್ನೆ ಮಾಡುವ ರೀತಿಯಲ್ಲಿ ಈ ಕಾರ್ಯಕ್ರಮ ಆಗಿದೆ, ನಡವಳಿಕೆ ಆಗಿದೆ. ಇದರ ಬಗ್ಗೆ ನಾನು ಸಲಹೆ ಕೊಡುವುದು ಇದರಲ್ಲಿ ಯಾರು ಯಾರನ್ನು ಬಂಧಿಸಬೇಕು. ಶಿಕ್ಷೆ ಮಾಡಬೇಕು ಎನ್ನುವಂಥ ಅಭಿಪ್ರಾಯ ಅಲ್ಲ. ಇದು ಎಷ್ಟು crucial ಎಂದರೆ ನಾಳೆಗೆ ಆಗಲೇ direction ಹೋಗಿದೆ. ಏನೇ ತೀರ್ಮಾನವಾಗುವುದಿದ್ದರೂ ಇಂದೇ ತೀರ್ಮಾನವಾಗಬೇಕು. ಈಗ ಸರ್ವೋಚ್ಚ ನ್ಯಾಯಾಲಯದಲ್ಲಿಯೂ ಕೂಡ ಸರ್ಕಾರದ ಪ್ರಶ್ನೆ ಮಾಡಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಸರ್ಕಾರ ಪ್ರಶ್ನೆ ಮಾಡಿದೆ ಎಂದರೆ ಅರ್ಥ ಏನು ಅಧ್ಯಕ್ಷರೆ? Election ಮಾಡುವಂಥವರು ಸರ್ಕಾರವೇ ಅಥವಾ Election Commissioner ನವರೋ? ಅವರ ಮೇಲುಸ್ತುವಾರಿಕೆ ಇರಬಹುದು. ಆದರೆ ಸರ್ಕಾರವೇ ಚುನಾವಣೆ ಮಾಡುವುದು. ಇವತ್ತು teachers participate ಮಾಡಬೇಕು. Examinations ಇವತ್ತಾಗಲೇ ಚಾಲೂ ಆಗಿದೆ. ಏಪ್ರಿಲ್‌ವರೆಗೂ ಕೂಡ ಪರೀಕ್ಷೆಗಳು ನಡೆಯುತ್ತವೆ. ಎಲ್ಲಾ ಶಿಕ್ಷಕರು ಸಹ ಪರೀಕ್ಷಾ ಕೆಲಸದಲ್ಲಿ involve ಆಗಿರುವಾಗ ಚುನಾವಣೆ ಮಾಡುವುದಕ್ಕೆ ಹೇಗೆ ಸಾಧ್ಯ? ಫೆಬ್ರವರಿ 12 ಅಥವಾ 14, 15ಕ್ಕೂ draft ಶುರು ಮಾಡಬಹುದು. ನೀವು ಮಾರ್ಚ್ 15–20ರೊಳಗಾಗಿ ಚುನಾವಣೆ ಮುಗಿಸಬೇಕೆಂದು ಹೊರಟರೆ ಇವತ್ತು ಶಿಕ್ಷಕರ ಪ್ರಶ್ನೆ ಏನು? ಎಜುಕೇಷನ್ ಪ್ರಶ್ನೆ ಏನು? ಮಕ್ಕಳ ಭವಿಷ್ಯದ ಪ್ರಶ್ನೆ ಏನು? ಇದನ್ನೇನು ಕೇಳದ ರೀತಿಯಲ್ಲಿ, ಸರ್ಕಾರವನ್ನು ಲೆಕ್ಕಕ್ಕೆ ಇಟ್ಟುಕೊಳ್ಳದ ರೀತಿಯಲ್ಲಿ ತೀರ್ಮಾನ ಮಾಡಿದರೆ ಇದು ಉದ್ಧಟತನ ಅಲ್ಲವೆ? ದಯಮಾಡಿ ನಾನು ಹೇಳುತ್ತಿದ್ದೇನೆ, ಚುನಾವಣಾ ಆಯೋಗದವರನ್ನು ಕರೆಸುವ ತೀರ್ಮಾನವನ್ನು ಮಾಡಬೇಕು. ನಾನು ಈ ಬಗ್ಗೆ ಹೆಚ್ಚಾಗಿ ಹೇಳಬೇಕಾಗಿಲ್ಲ. ಇಂಥ ಸಂಘರ್ಷ ಬಂಧಂಥ ಸಂದರ್ಭದಲ್ಲಿ, ಅದರ ಪರ–ವಿರೋಧ ಎನ್ನುವ ಪ್ರಶ್ನೆ ಬೇರೆಯಾಗುತ್ತದೆ. ಅದೇನೇ ಇರಲಿ. ಸಂಘರ್ಷ ಬಂದಂಥ ಸಂದರ್ಭದಲ್ಲಿ ಇವತ್ತು ಎಂಥ ಸಂದರ್ಭದಲ್ಲಿಯೂ

ಕೂಡ ಇದನ್ನು ಈಜುವಂಥ ಪ್ರಯತ್ನವನ್ನು ತಮ್ಮ ಖರ್ಚಿಯಿಂದ ಬೋಪಯ್ಯನವರು ಮಾಡಿದ್ದಾರೆ. ಎಂಥದೋ ಸಂದರ್ಭ ವಿಷಯ ಬೇರೆ. ನಾನು ಅದನ್ನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇಲ್ಲಿ ಸದನದ ಸಾರ್ವಭೌಮತೆಯ ಪ್ರಶ್ನೆ, ಸದಸ್ಯರ ಹಕ್ಕಿನ ಪ್ರಶ್ನೆ, ಹಕ್ಕಿಗೆ ಚ್ಯುತಿ ಬರದಂಥ ರೀತಿಯಲ್ಲಿ ಇವತ್ತು ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ. ಅಷ್ಟೇ ಪ್ರಮಾಣದಲ್ಲಿಯೂ ಕೂಡ ಚುನಾವಣೆಗಳನ್ನು ನ್ಯಾಯಯುತವಾಗಿ ನಡೆಸಬೇಕಾದಂಥ ಜವಾಬ್ದಾರಿಕೆ ಸಹ ತಮಗಿದೆ. ದಯಮಾಡಿ ನಾನು ಅರಿಕೆ ಮಾಡುತ್ತೇನೆ. ಇವತ್ತು ಬಹಳಷ್ಟು ಜನ ಶಾಸಕರೆಲ್ಲರೂ ಕೂಡಾ ಮನವಿಯನ್ನು ಮಾಡಿದ್ದಾರೆ. ಇವತ್ತು ನಿರ್ಣಯವನ್ನೂ ಸಹ ಮಂಡಿಸಿದ್ದಾರೆ. ದಯಮಾಡಿ ಅವರನ್ನು ಇವತ್ತೇ ಈ ಕ್ಷಣದಲ್ಲೇ ಕರೆಸುವಂಥ ತೀರ್ಮಾನವನ್ನು ಮಾಡಿ ಅವರಿಗೆ ಆದೇಶವನ್ನು ಮಾಡಿ. ನಾವು ಸಂವಿಧಾನದ ಚೌಕಟ್ಟಿನಲ್ಲಿ ಮಾಡುತ್ತಿದ್ದೇವೆ. ಚುನಾವಣೆಯನ್ನು ಮುಂದಕ್ಕೆ ಹಾಕಿ. 2011ರ ಜನಗಣತಿ ಪ್ರಕಾರ ಚುನಾವಣೆಯನ್ನು ಮಾಡುವುದಕ್ಕೆ ಪ್ರಾತಿನಿಧ್ಯವನ್ನು ಕೊಡುವಂಥ ಕೆಲಸವನ್ನು ಮಾಡೋಣ. ನಮ್ಮ ರಾಜ್ಯಕ್ಕೆ, ನಮ್ಮ ಜನರಿಗೆ ಸಿಗಬೇಕಾಗಿರುವಂಥ ಸೌಲಭ್ಯ, ಸೌಕರ್ಯ, ಹಣಕಾಸು ಎಲ್ಲವನ್ನೂ ಕೂಡ ಪಡೆಯುವುದರಲ್ಲಿ ಜವಾಬ್ದಾರಿಕೆಯನ್ನು ವಹಿಸಬೇಕು. ಸಂವಿಧಾನದ ಚೌಕಟ್ಟಿನಲ್ಲಿ ತಮ್ಮ discretion ಉಪಯೋಗಿಸಬೇಕು, ಧೈರ್ಯವನ್ನು ಪ್ರದರ್ಶಿಸಬೇಕು ಎಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಮಾತನಾಡಲಿ, ತಾವು ನಂತರ ಮಾತನಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ರಾಜ್ಯ ಚುನಾವಣಾ ಆಯೋಗದ commissioner ರವರು ಇದನ್ನು ಪ್ರತಿಷ್ಠೆ ಮಾಡಿಕೊಂಡಂತೆ ಕಾಣುತ್ತಿದೆ. ಅವರಿಗೆ ವಿವೇಚನೆಯಿದೆ.

ಚುನಾವಣೆ ಮಾಡಬೇಕಾದರೆ, ಈಗ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು. ನಮ್ಮಲ್ಲಿ 73–74ನೇ ಸಂವಿಧಾನಕ್ಕೆ ತಿದ್ದುಪಡಿ ಆಗಿದೆ. ತಿದ್ದುಪಡಿ ಮಾಡಿ ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಪಂಚಾಯಿತಿ ಸಂಸ್ಥೆಗಳಲ್ಲಿ ಹಿಂದುಳಿದವರಿಗೆ, ದಲಿತರಿಗೆ, ಮಹಿಳೆಯರಿಗೆ ಮೀಸಲಾತಿ ಕೊಡಬೇಕೆನ್ನುವುದು ಆಗಿದೆ. ಇದು Parliament Pass ಮಾಡಿರುವುದು. It became a law. It is a law of the land. ಇದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು. ಈಗ 2007ರ ಮೀಸಲಾತಿ ಪಟ್ಟಿಯ ಪ್ರಕಾರ ಚುನಾವಣೆ ಮಾಡಿದರೆ, Parliament ನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕೊಡಬೇಕು. 50 ಪರ್ಸೆಂಟ್ ಮೀಸಲಾತಿ ಇರಬೇಕು ಎಂದು ತಿದ್ದುಪಡಿ ಮಾಡಿದ್ದಾರೆ. 50ಕ್ಕೆ ಮೀರದಂತೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಜಾತಿ ಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಇರಬೇಕೆಂದು ಇದೆ. 2007ರ ಪಟ್ಟಿಯಲ್ಲಿ ಇದು ಸೇರಿದೆಯೆ? ಸೇರಿಲ್ಲ. ಇದನ್ನು ಪಟ್ಟಿಯಲ್ಲಿ ಸೇರಿಸಬೇಕೋ, ಬೇಡವೋ? ಇದು 2007ರ ಮೀಸಲಾತಿ ಪಟ್ಟಿ ಪ್ರಕಾರ ಮಾಡಿದರೆ, ಸಂವಿಧಾನ ತಿದ್ದುಪಡಿಗೆ ಅನುಗುಣವಾಗಿ ಚುನಾವಣೆ ಮಾಡಿದಂತಾಗುವುದಿಲ್ಲ. 2007ರ ಪಟ್ಟಿಯಲ್ಲಿ ಇದು ಇರಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅವರ ಜಾತಿ ಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಇರಬೇಕೆನ್ನುವುದು ಇರಲಿಲ್ಲ. ಆ ಪಟ್ಟಿ ಆವತ್ತಿಗೆ valid ಆಗುತ್ತದೆಯಷ್ಟೆ. Today it is not valid. 2007 ರ ಪಟ್ಟಿಯ ಪ್ರಕಾರ ಮಾಡಿದರೆ, it is not valid. ಇದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಇದನ್ನು ಚುನಾವಣಾ ಆಯೋಗವು ಗಮನದಲ್ಲಿಟ್ಟುಕೊಳ್ಳಬೇಕಿತ್ತು. ಇದನ್ನು ಸಂಪೂರ್ಣವಾಗಿ ಅವರು ನಿರ್ಲಕ್ಷ್ಯ ಮಾಡಿದ್ದಾರೆ. ಇದಕ್ಕೆ ಗೌರವ ಕೊಟ್ಟಿಲ್ಲ. ಇದು ಒಂದು. ಎರಡನೆಯದಾಗಿ, ಮಹಿಳೆಯರಿಗೆ ಶೇಕಡ 50 ರಷ್ಟು ಮೀಸಲಾತಿ ಕೊಡಬೇಕು ಎಂದು ಮಾಡಿದೆ. If the Election Commission goes on the basis of 2007 reservation list,

ಮಹಿಳೆಯರಿಗೆ ಎಲ್ಲಿ 50% ಮೀಸಲಾತಿ ಸಿಗುತ್ತದೆ? ಸಂವಿಧಾನಕ್ಕೆ ತಿದ್ದುಪಡಿ ಆಗಿದೆ. ಇದಕ್ಕೆ ವಿರುದ್ಧವಾಗುತ್ತದೆ. ಇದನ್ನೆಲ್ಲಾ ಪರಿಗಣಿಸಬೇಕಾಗಿತ್ತು. ಇದು ಅವರ ವಿವೇಚನೆಗೆ ಬಿಟ್ಟಿದ್ದು. ಇವರಿಗೆ ಸ್ವತಂತ್ರವಾಗಿ ಚುನಾವಣೆ ನಡೆಸಲು ಸ್ವಾತಂತ್ರ್ಯವಿದೆಯೇ ಹೊರತು ಕಾನೂನು ಉಲ್ಲಂಘನೆ ಮಾಡಿ ಚುನಾವಣೆ ಮಾಡಲು ಸ್ವಾತಂತ್ರ್ಯವಿಲ್ಲ. ನಿರ್ಭಯವಾಗಿ, ನಿಷ್ಪಕ್ಷಪಾತವಾಗಿ ಚುನಾವಣೆ ಮಾಡಲು ಮಾತ್ರ Election Commission ಗೆ ಸ್ವಾತಂತ್ರ್ಯವಿದೆ. ಹಾಗೆಂದು ಸಂವಿಧಾನದ ಉಲ್ಲಂಘಟನೆ ಮಾಡಿ, ಕಾನೂನು ಉಲ್ಲಂಘನೆ ಮಾಡಿ ಚುನಾವಣೆ ಮಾಡಲು ಇವರಿಗೆ ಯಾರೂ ಸ್ವಾತಂತ್ರ್ಯ ಕೊಟ್ಟಿಲ್ಲ. ಯಾವ ಕಾನೂನು ಅಧಿಕಾರ ಕೊಟ್ಟಿಲ್ಲ. ಇದನ್ನು ಇವರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. Supreme Court ಕೂಡಾ ಇವರಿಗೆ ಮೊನ್ನೆ ಆದೇಶ ಮಾಡುವಾಗ discretion ಕೊಟ್ಟಿದೆ. ಸುಪ್ರೀಂ ಕೋರ್ಟ್ ಏನು ಹೇಳಿದೆ? 'In view of these circumstances, we are clearly of the view that the State Election Commission is within its right to proceed with the Elections' ಎಂದು ಹೇಳಿರುವುದು. It should have exercised its discretion. Supreme Court has not taken away all the discretionary powers of the comissioner of the State Election Commission. See, the ball is in the court of the State Election Commission. He has to exercise his discretion. ಇದು ಒಂದು. ಇನ್ನೊಂದು orders ನಲ್ಲಿ ಇನ್ನು ಒಂದು ಏನು ಹೇಳಿದೆ ಎಂದರೆ, `the Government should furnish its proposal to the State Election Commission on or before 4th February, 2013. In the event, the State Government does not furnish the information by that date, it would be open to the State Election Commission to proceed on the basis of the reservation of seats as are presently existing' ಎಂದು ಹೇಳಿದೆ. 'It will have to proceed on the basis of the existing

electoral rolls as far as the rotation concerned' ಎಂದು ಹೇಳಿದೆ. ಆಮೇಲೆ `the elections within the time frame as required by the Constitution and the State enactments'. ಇವೆಲ್ಲವನ್ನೂ ಉಲ್ಲಂಘನೆ ಮಾಡಿ ಮಾಡಬೇಕೆಂದು ಇವರಿಗೆ ಯಾರೂ ಅಧಿಕಾರ ಕೊಟ್ಟಿಲ್ಲ ಸುಪ್ರೀಂಕೋರ್ಟ್ ಕೂಡಾ ಹೇಳಿಲ್ಲ. When such being the case, ಪರಿಸ್ಥಿತಿ ಹೀಗಿರುವಾಗ ಇವರಿಗೆ ego. ನಮಗೆ ಸ್ವಾತಂತ್ರವಿದೆ, ನಾವು ಏನು ಬೇಕಾದರೂ ಮಾಡಬಹುದು ಎಂದು ಮಾಡಲು ಹೊರಟಿದ್ದಾರೆ. ಇದರಿಂದ ಆಗುವ ಅನ್ಯಾಯವನ್ನು ಸರಿಪಡಿಸುವವರು ಯಾರು? ದಲಿತರಿಗೆ, ಹಿಂದುಳಿದವರಿಗೆ, ಮಹಿಳೆಯರಿಗೆ ಅನ್ಯಾಯವಾಗುತ್ತದೆ. ಸಂವಿಧಾನ ಹಾಗೂ ಕಾನೂನು ಉಲ್ಲಂಘನೆಯಾಗುತ್ತದೆ. ಇದನ್ನು ಸರಿಪಡಿಸುವವರು ಯಾರು? ಹೊಸದಾಗಿ voters ಆಗಿದ್ದಾರೆ. 2001 ಕ್ಕೂ 2011 ಕ್ಕೂ ಬಹಳ ಜನ voters ಬಂದಿದ್ದಾರೆ. ಹೊಸ ಮತದಾರರು ಬಂದಿದ್ದಾರೆ. 18 ವಯಸ್ಸು ತುಂಬಿದವರು ಬಹಳ ಜನ ಬಂದಿದ್ದಾರೆ. ಬಹಳ ಜನ ಸತ್ತು ಹೋಗಿದ್ದಾರೆ. 2001ರಲ್ಲಿ ಇದ್ದವರು ಕೆಲವರು 2011 ರವರೆಗೆ ಸತ್ತು ಹೋಗಿರುತ್ತಾರೆ. ಅವರ ಹಕ್ಕಿಗೆ ಚ್ಯುತಿ ಮಾಡಿದಂತಾಗುತ್ತದೆ. ಕಿತ್ತುಕೊಂಡಂತಾಗುತ್ತದೆ. Is it not violation of the law? ಕನಿಷ್ಠ ಪಕ್ಷ ಇದನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿತ್ತು. ಇದನ್ನು ಗಣನೆಗೆ ತೆಗೆದುಕೊಳ್ಳದೆ ಪ್ರತಿಷ್ಠೆ ಮಾಡಿಕೊಂಡು, ನಿನ್ನೆ ಸದನದಲ್ಲಿ ಸರ್ವಾನುಮತದಿಂದ ಒಂದು ತೀರ್ಮಾನ ಮಾಡಿ ಕಳುಹಿಸಿಕೊಟ್ಟರೆ ಕನಿಷ್ಠ ಪಕ್ಷ ಅದನ್ನು ನೋಡುವ ಕರ್ತವ್ಯವನ್ನೂ ಸಹ ಮಾಡಿಲ್ಲ. ಹಾಗಾದರೆ ಸದನದ ಬಗ್ಗೆ ಇವರಿಗೆ ಏನು ಗೌರವವಿದೆ? ಈಗಾಗಲೇ ಶ್ರೀ ಜಯಚಂದ್ರ ರವರು ಓದಿ ಹೇಳಿದ್ದಾರೆ. ಮತ್ತೆ ನಾನು ಅದನ್ನು ಓದಲು ಹೋಗುವುದಿಲ್ಲ. It amounts to breach of the House. It amounts to breach of privilege and amounts to contempt of court, contempt of the House. ಆದುದರಿಂದ ಮಾನ್ಯ ಅಧ್ಯಕ್ಷರೆ, ನನ್ನ ಪ್ರಕಾರ ಅವರನ್ನು ಕರೆಸಿ ಬುದ್ಧಿ ಹೇಳುವುದು

ಒಳ್ಳೆಯದೆನಿಸುತ್ತದೆ. ಅವರಿಗೆ ಕಾನೂನು ತಿಳುವಳಿಕೆ ಕೊಟ್ಟರೆ ಒಳ್ಳೆಯದು ಎಂದು ಅನಿಸುತ್ತದೆ. ನೀವು ಒಬ್ಬರು ವಕೀಲರಾಗಿದ್ದೀರಿ.

ಅಧ್ಯಕ್ಷರು: ಸೋಮವಾರ ಅವರನ್ನು ಸದನಕ್ಕೆ ಕರೆಸೋಣ.

ಶ್ರೀ ಸಿದ್ದರಾಮಯ್ಯ: ಯಾರೂ ಕೂಡಾ ಚುನಾವಣೆ ಬೇಡವೆಂದು ಹೇಳುವುದಿಲ್ಲ. ಇದನ್ನೆಲ್ಲಾ follow ಮಾಡಿ ಎಂದು ಹೇಳುತ್ತಿದ್ದೆವಷ್ಟೆ. 2011 ನೇ census list follow ಮಾಡಿ ಮಹಿಳೆಯರಿಗೆ 50% ಮೀಸಲಾತಿ ಕೊಡಿ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕೊಡಿ. ಚುನಾವಣೆಯನ್ನು ಅವರೇ ಮಾಡಿಕೊಳ್ಳುವುದಕ್ಕೆ ಆಗುತ್ತದೆಯೇನು? ಸರ್ಕಾರಿ ನೌಕರರುಗಳನ್ನು ಚುನಾವಣೆಗೆ ಕೊಡಬೇಕೋ, ಬೇಡವೋ? ಮಾರ್ಚ್‌ನಲ್ಲಿ ಪರೀಕ್ಷೆಗಳು ಪ್ರಾರಂಭವಾಗುತ್ತವೆ. ಹೇಗೆ ಶಿಕ್ಷಕರನ್ನು ಕೊಡುವುದು? ಸರ್ಕಾರ ಶಿಕ್ಷಕರನ್ನು ಕೊಡುವುದಿಲ್ಲವೆಂದರೆ ಚುನಾವಣಾ ಆಯೋಗದವರು ಏನು ಮಾಡುತ್ತಾರೆ? ಅವರು appointment ಮಾಡಿಕೊಳ್ಳುವುದಕ್ಕೆ ಆಗುತ್ತದೆಯೇನು?

ಶ್ರೀ ಎಸ್ ಸುರೇಶ್ ಕುಮಾರ್ : Outsource ತೆಗೆದುಕೊಳ್ಳುತ್ತಾರೆ

ಶ್ರೀ ಸಿದ್ದರಾಮಯ್ಯ : Outsource ತೆಗೆದುಕೊಂಡು ಮಾಡಲು ಬರುತ್ತದೆಯೇ ಅವರಿಗೆ? ಇಷ್ಟು common sense ಅವರು ಮಾಡಬೇಡವೆ? He is not above the law. He cannot show disrespect to this House. ಆದುದರಿಂದ, it is a fit case in which he can be summoned and properly he should be advised, ಇದನ್ನು ಮಾಡಿ ಎಂದು ಹೇಳಬೇಕಾಗುತ್ತದೆ. ಇದೆಲ್ಲಾ ಉಲ್ಲಂಘನೆಯಾಗುತ್ತಿರುವುದರಿಂದ, it is a clear case of breach of privilege of the House. ಇದು ನನ್ನ ಅಭಿಪ್ರಾಯ. ಚುನಾವಣೆ ಅವರು ಮಾಡಬೇಕು. ಸ್ವಾತಂತ್ರವಾಗಿ, ನಿಷ್ಪಕ್ಷಪಾತವಾಗಿ ಮಾಡಲಿ. ಅದರಲ್ಲಿ ಸರ್ಕಾರವಾಗಲಿ, ಯಾರೂ interfere ಆಗಬಾರದು. ಅದಕ್ಕೆ ಅವರು

ಸ್ವತಂತ್ರರಾಗಿದ್ದಾರೆ. ನಾವು ಅದನ್ನೆಲ್ಲಾ ಪ್ರಶ್ನೆ ಮಾಡುತ್ತಿಲ್ಲ. ಅವರ ಅಧಿಕಾರದ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ.

The question is, ನೀವು ಇವುಗಳನ್ನೆಲ್ಲಾ ಮಾಡಿಲ್ಲ. ಅವುಗಳನ್ನೆಲ್ಲಾ ಮಾಡಿಕೊಂಡು ಮಾಡಿ ಎಂದು ಹೇಳಬೇಕಾಗುತ್ತದೆ. ಇದು ನ್ಯಾಯಸಮ್ಮತವಾಗಿದೆ. ಇದಕ್ಕೆ ಸಕಾರಣವಿದೆ ಮತ್ತು ಕಾನೂನಿನ ಬಲ ಇದೆ. ಇವೆಲ್ಲಾ ಹಿನ್ನೆಲೆಯಲ್ಲಿ ಅವರನ್ನು ಕರೆದು ಹೇಳಬೇಕಾಗುತ್ತದೆ ಮತ್ತು ಅವರ ಮಾತು ಕೇಳಬೇಡಿ ಎಂದು ಜಿಲ್ಲಾಧಿಕಾರಿಗಳಿಗೂ ಕೂಡ ಹೇಳಬೇಕಾಗುತ್ತದೆ. ಇವರು ಹೇಳಿದ ತಕ್ಷಣ ಕೇಳಬೇಕೆ? ಇವರ ಸಂಬಳ ಕೊಡುವವರು ಯಾರು? Election Commissionರವರೇ ಇವರಿಗೆ ಸಂಬಳ ಕೊಡುತ್ತಿದ್ದಾರೆಯೇ? ಇದು ಜನರ ದುಡ್ಡು. This is the House representing the six crore people of the State. The opinion of the House is the opinion of the people of the State. How can he go against the opinion of the people, opinion of this House? 225 ಜನ ಎಂಎಲ್ಎ ಗಳು ನಿರ್ಣಯವೊಂದನ್ನು ಅಂಗೀಕರಿಸಿ, ಇದು ನಮ್ಮ ಸರ್ವಸಮ್ಮತದ ಅಭಿಪ್ರಾಯವೆಂದು ಹೇಳಿದಾಗ, ಆ ಅಭಿಪ್ರಾಯವನ್ನು ಕಸದ ತರಹ ಕಸದ ಬುಟ್ಟಿಗೆ ಹಾಕುವುದಾದರೆ, ಈ ಸದನಕ್ಕೆ ಏನು ಗೌರವ ಸಿಕ್ಕಿದಂತಾಯಿತು? ಈ Legislature ಗೆ ಏನು ಗೌರವ ಸಿಕ್ಕಿದಂತಾಯಿತು? ಹಾಗಾದರೆ ನಮಗೆ ಸಂವಿಧಾನ ಏಕೆ ಬೇಕು? ಪ್ರತಿಯೊಂದೂ ಕೂಡ, ಅದು Judiciary ಇರಲಿ, Legislature ಇರಲಿ, Executive ಇರಲಿ, ಅವರ domain ನಲ್ಲಿ ಕೆಲಸ ಮಾಡಲಿಕ್ಕೆ ಅವರು ಸ್ವತಂತ್ರರಾಗಿದ್ದಾರೆ. ಅವರವರ ಗೌರವಗಳನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ಸಂವಿಧಾನದಲ್ಲಿ ಹೇಳಿದೆ. ಅದಕ್ಕೋಸ್ಕರ ಇದರ ಗೌರವವನ್ನೂ ಕೂಡ ಕಾಪಾಡಬೇಕಲ್ಲವೇ? ಇದರ ಸಾರ್ವಭೌಮತ್ವವನ್ನು ಎತ್ತಿ ಹಿಡಿಯಬೇಕಾಗಿರುವುದು ಮಾನ್ಯ ಸಭಾಧ್ಯಕ್ಷರ ಜವಾಬ್ದಾರಿಯಾಗಿದೆ. Because, you are there on the Chair. ಅದಕ್ಕಾಗಿಯೇ ನಾವು

ನಿಮ್ಮನ್ನು ಮೇಲಕ್ಕೆ ಕುಳ್ಳಿರಿಸಿದ್ದೇವೆ. ನಾವೆಲ್ಲಾ ಕೆಳಕ್ಕೆ ಕುಳಿತುಕೊಂಡು, ನಿಮ್ಮನ್ನು ಮೇಲಕ್ಕೆ ಕುಳ್ಳಿರಿಸಿದ್ದೇವೆ. Constitution ನಲ್ಲಿ ಇದನ್ನು ಎತ್ತಿ ಹಿಡಿಯಬೇಕಾಗಿರತಕ್ಕದ್ದು ನಿಮ್ಮ ಜವಾಬ್ದಾರಿಯಾಗಿದೆ. ನೀವು ಅವರನ್ನು ಕರೆಸಿ ಸರಿಯಾದ ಪಾಠ ಹೇಳಬೇಕು. ಸರ್ಕಾರದವರು ಸ್ವಲ್ಪ ಧೈರ್ಯ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಸರ್ಕಾರದವರು ನಾವು ಮೇಷ್ಟ್ರುಗಳನ್ನು ಕೊಡುವುದಿಲ್ಲವೆಂದು ಹೇಳಲಿ. ಅವರು ಏನು ಮಾಡುತ್ತಾರೋ ನೋಡೋಣ. ನಾವು ಪೋಲೀಸ್ ಕೊಡುವುದಿಲ್ಲವೆಂದು ಹೇಳಿ. ಅವರು ಏನು ಮಾಡುತ್ತಾರೋ ನೋಡೋಣ? ಅವರೆಲ್ಲರೂ ಅವರ ಕೈಕೆಳಗೆ ಇದ್ದಾರೆಯೇ? ಪರೀಕ್ಷೆ ಮುಖ್ಯವಲ್ಲವೇ? ರಾಜ್ಯದಲ್ಲಿ ಬರಗಾಲವಿದೆ, ಕುಡಿಯುವ ನೀರು ಇಲ್ಲ, ಕರೆಂಟ್ ಇಲ್ಲ, ಸರ್ಕಾರದ ಹತ್ತಿರ ದುಡ್ಡೂ ಸಹ ಇಲ್ಲ. ಇವೆಲ್ಲಾ ಇರುವಾಗ ಹೇಗೆ ಚುನಾವಣೆ ನಡೆಸುತ್ತಾರೆ? ನಿಮಗೆ ಸಹಕಾರ ಕೊಡುವುದಿಲ್ಲ ಎಂದು ಸರ್ಕಾರ ಅವರಿಗೆ ಹೇಳಬೇಕು. Law Minister ರವರೇ, ತಾವು ಸ್ವಲ್ಪ ಧೈರ್ಯ ಮಾಡಬೇಕು. ಏನು ನಿಮ್ಮನ್ನು ಜೈಲಿಗೆ ಕಳುಹಿಸುತ್ತಾರೆಯೇ? ಯಾರೂ ಜೈಲಿಗೆ ಕಳುಹಿಸುವುದಕ್ಕಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಜೈಲಿಗೆ ಹೋಗುವ ಪ್ರಶ್ನೆ ಬಂದರೆ, ಇಲ್ಲಿ ಸರ್ವಾನುಮತದ ನಿರ್ಣಯ ಅಂಗೀಕಾರವಾಗಿರುವುದರಿಂದ, ಎಲ್ಲರೂ ಜೈಲಿಗೆ ಹೋಗಬೇಕಾಗುತ್ತದೆ. ಇವರೊಬ್ಬರೇ ಹೋಗಬೇಕಾಗುತ್ತದೆ ಎಂಬ ಪ್ರಶ್ನೆ ಇಲ್ಲಿ ಬರುವುದು ಬೇಡ. ನಮ್ಮನ್ನೆಲ್ಲಾ ರಕ್ಷಣೆ ಮಾಡಲಿಕ್ಕೆ ಅಲ್ಲಿ ಸ್ಪೀಕರ್‌ರವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ:– ಅವರವರ ವ್ಯಾಪ್ತಿಯೊಳಗೆ ಎಲ್ಲರೂ ಅವರ ಕೆಲಸವನ್ನು ಮಾಡಬೇಕು. Whether the Legislature or the Judiciary or the Executive, ಅವರವರ ಕ್ಷೇತ್ರದಲ್ಲಿ ಅವರವರು ಸಾರ್ವಭೌಮರೇ! ನಮ್ಮ ಕ್ಷೇತ್ರದಲ್ಲಿ ನಾವೇ ಸಾರ್ವಭೌಮರು. Legislation ಮಾಡುವುದು ನಮ್ಮ ಕೆಲಸ. Legislature ಗೌರವವನ್ನು ಎತ್ತಿ ಹಿಡಿಯುವುದು ನಮ್ಮ ಜವಾಬ್ದಾರಿಯಾಗಿದೆ ಮತ್ತು ನಮ್ಮ ಕರ್ತವ್ಯವಾಗಿದೆ. ಇದರ ಮೇಲೆ ಯಾರೂ ಕೂಡ ಕುದುರೆ ಸವಾರಿ ಮಾಡಲಿಕ್ಕೆ ಆಗುವುದಿಲ್ಲ.

ನಮ್ಮ ಮೇಲೆ ಯಾರೂ ಸವಾರಿ ಮಾಡಲಿಕ್ಕಾಗುವುದಿಲ್ಲ. ಇವರೊಬ್ಬ Executive officer, IAS officer. ಇಲ್ಲಿ ನಮ್ಮ ಸರ್ಕಾರದಲ್ಲೇ ಕೆಲಸ ಮಾಡುತ್ತಿದ್ದವರು. ನೀವು ಎಲೆಕ್ಷನ್ ಕಮೀಷನರ್ ಆಗಿ ಕೆಲಸ ಮಾಡಿ ಎಂದು ಸರ್ಕಾರವೇ ಅವರನ್ನು ಅಲ್ಲಿಗೆ ಕಳುಹಿಸಿಕೊಟ್ಟಿದೆ. ಅವರು ಅಲ್ಲಿಗೆ ಹೋದ ತಕ್ಷಣವೇ, ಈ ರೀತಿಯ ಆಟ ಆಡಿದರೆ, ಇವರಿಗೆ ಏನು ಮಾಡಬೇಕು? ಇದು ಬಹಳ ಅತಿಯಾಯಿತು. ಸರ್ಕಾರವೇ ಮಾಡಿದ ಕೆಲಸ ಇದು. ಬಹುಶಃ ಒಳ್ಳೆಯ posting ಸಿಕ್ಕಲ್ಲವೆಂದು ಅವರಿಗೆ ಸರ್ಕಾರದ ಮೇಲೆ ಕೋಪ ಇರಬೇಕು. ಅಲ್ಲೆಲ್ಲೋ ಎಲೆಕ್ಷನ್ ಕಮಿಷನರ್ ಆಗಿ ಕೂರಿಸಿ ಬಿಟ್ಟಿದ್ದಾರೆ ಎಂದು ಕೋಪದಿಂದ ಅವರು ಇದನ್ನೆಲ್ಲಾ ಮಾಡುತ್ತಿದ್ದಾರೆ. ನಮ್ಮ ಮೇಲೆ ಅವರಿಗೆ ಏನೂ ಇಲ್ಲ. ಸರ್ಕಾರದ ಮೇಲೆಯೇ ಅವರ ಕೋಪವಿರುವಂತೆ ಕಾಣುತ್ತದೆ. ಮಾನ್ಯ ಸಭಾಧ್ಯಕ್ಷರೇ, ನಾನು ಲಘುವಾಗಿ ಮಾತನಾಡುತ್ತಿಲ್ಲ. These are all Constitutional obligations. ಸಂವಿಧಾನದ ಅಡಿಯಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಅವರೂ ಕೂಡಾ ಅವರ ಇತಿಮಿತಿಯಲ್ಲಿ ಕೆಲಸ ಮಾಡಬೇಕು. He is not a dictator. ಅವರ ಮನಸ್ಸಿಗೆ ಬಂದಂತೆ ಮಾಡಲಿಕ್ಕಾಗುವುದಿಲ್ಲ. ಇದು ಪಾಕಿಸ್ತಾನವಲ್ಲ. ಇದು ಭಾರತ ದೇಶ. ನಾವು ಇಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಮಗೊಂದು ಸಂವಿಧಾನವಿದೆ. ಆ ಸಂವಿಧಾನದ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ, ಮಾನ್ಯ ಅಧ್ಯಕ್ಷರೇ, ಅವರನ್ನು ಕರೆಸಿ ನೀವು ಸೂಕ್ತ ತಾಕೀತು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಂ.ವಿ. ನಾಗರಾಜು (ನೆಲಮಂಗಲ): ಮಾನ್ಯ ಅಧ್ಯಕ್ಷರೆ, ದೇಶಕ್ಕೆ ಸ್ವಾತಂತ್ರ್ಯ ಬಂದು 64 ವರ್ಷಗಳಾಯಿತು. ಜನರಿಗೆ ನಾವು ಯಾವ ರೀತಿಯ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ. SC/STಗಳಿಗೆ, ಮಹಿಳೆಯರಿಗೆ ಏನು ಕೊಟ್ಟಿದ್ದೇವೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಹಿರಿಯರೆಲ್ಲರೂ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಇವರು ಯಾರದೋ ಒತ್ತಡಕ್ಕೆ ಮಣಿದು ಈ ರೀತಿ ಮಾಡುತ್ತಿದ್ದಾರೆ. ಬೇರೆ ಏನೂ ಇವರ

ಉದ್ದೇಶವಿದ್ದಂತೆ ಕಾಣುತ್ತಿಲ್ಲ. ಯಾರದೋ ಒತ್ತಡಕ್ಕೆ ಮಣಿದು ಎಲೆಕ್ಷನ್ ಮಾಡಬೇಕು, ಪರಿಸ್ಥಿತಿ ಗಬ್ಬೆಬ್ಬಿಸಬೇಕು ಎನ್ನುವುದಕ್ಕಾಗಿಯೇ ಅವರು ಈ ಕೆಲಸವನ್ನು ಮಾಡುತ್ತಿದ್ದಾರೆ. ಯಾರು ಹೇಗಾದರೂ ಹಾಳಾಗಿ ಹೋಗಲಿ, ದೇಶಕ್ಕೆ ಸ್ವಾತಂತ್ರ್ಯ ಬಂದು 64 ವರ್ಷಗಳಾಗಿದ್ದರೂ, SC/ST ಜನಾಂಗಕ್ಕೆ ಇನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ. ಈಗೀಗ ಸ್ವಲ್ಪ ಸ್ವಲ್ಪ ಸಿಗುತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಈಗ ಸ್ವಲ್ಪ ಕಣ್ಣು ಬಿಡುತ್ತಿದ್ದಾರೆ. ಅವರನ್ನು ಮಟ್ಟ ಹಾಕಲಿಕ್ಕೆ ಈ ಎಲೆಕ್ಷನ್ ಕಮಿಷನ್‌ಗೆ ಏನು ಪವರ್ ಇದೆ? ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ದಯಮಾಡಿ ಅವರನ್ನು ಸದನಕ್ಕೆ ಕರೆಸಿ ಛೀಮಾರಿ ಹಾಕಬೇಕು. 14ನೇ ತಾರೀಖು ಅವರು ರಿಟೈರ್ ಆಗುತ್ತಿದ್ದಾರೆಂದು ತಿಳಿದು ಬಂದಿದೆ. ಉದ್ದೇಶಪೂರ್ವಕವಾಗಿಯೇ ಅವರು ಈ ತರಹ ಮಾಡುತ್ತಿದ್ದಾರೆ. ಆದ್ದರಿಂದ, ದಯಮಾಡಿ SC/ST ಜನಾಂಗಕ್ಕೆ, ಹಿಂದುಳಿದವರಿಗೆ ಮತ್ತು ವಿಶೇಷವಾಗಿ ಮಹಿಳೆಯರಿಗೆ ಬಹಳ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ಎಲ್ಲಾ ಹಿರಿಯರು ಹೇಳಿದ್ದಾರೆ. ಅವರನ್ನು ಇಲ್ಲಿಗೆ ಕರೆಸಬೇಕು. ಅವರು ಮಾಡುತ್ತಿರುವ ಉದ್ದೇಶ ನಮಗೆ ಸ್ಪಷ್ಟವಾಗಿ ಗೊತ್ತಿದೆ. ವೈಯಕ್ತಿಕ ದ್ವೇಷದಿಂದ, ರಾಜಕಾರಣಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ. ದಯಮಾಡಿ ಆರೂವರೆ ಕೋಟಿ ಜನರಿಗೆ ಅನ್ಯಾಯವಾಗುವುದನ್ನು ತಪ್ಪಿಸಬೇಕು. ನಾವು 224 ಜನ ಎಂಎಲ್‌ಎ ಗಳೆಂದು ಏನಿದ್ದೇವೋ, ಅವರಿಗೆ ಗೌರವ ಸಿಗಬೇಕು. ಇಲ್ಲದಿದ್ದರೆ, ನಾವುಗಳು ಏಕೆ ಎಂಎಲ್‌ಎಗಳಾಗಿ ಇಲ್ಲಿ ಇರಬೇಕು? ಏತಕ್ಕಾಗಿ ಈ Assembly ಇರಬೇಕು? ತಾವು ಅವರನ್ನು ಕರೆಸಿ, ಇದನ್ನೆಲ್ಲಾ ಕೇಳಬೇಕು. 224 ಜನ ಎಂಎಲ್‌ಎ ಗಳೆಲ್ಲರೂ ಸೇರಿ ಸರ್ವಾನುಮತದಿಂದ ಈ ಒಂದು resolution ಮಾಡಿರುವುದರಿಂದ ಜೈಲಿಗೆ ಹೋಗುವುದಾದರೆ, ಎಲ್ಲರೂ ಹೋಗೋಣ ಬಿಡಿ. ಇದರ ಬಗ್ಗೆ ರಾಜ್ಯದ ಜನತೆ ತೀರ್ಮಾನ ಮಾಡಲಿ. ದಯಮಾಡಿ ಅವರನ್ನು ಈಗಲೇ, ಇನ್ನರ್ಧ ಗಂಟೆಯೊಳಗಾಗಿ ಕರೆಸಿ ಹೇಳಬೇಕು. ಅವರು ನಿಮಗೆ ಮಾಹಿತಿ ಕೊಡಬೇಕು. ಸರ್ಕಾರದ ಕಾನೂನು ಮಂತ್ರಿಗಳು ಬೋಲ್ಡ್ ಸ್ಟೆಪ್‌ವೊಂದನ್ನು ತೆಗೆದುಕೊಂಡು, imfmediate ಆಗಿ

DC ಗಳಿಗೆ ಹೇಳಬೇಕು. ಮಾನ್ಯ ಸಿದ್ದರಾಮಯ್ಯನವರು ಹೇಳಿದಂತೆ, ಇವತ್ತು ಅವರಿಗೆ ಸಂಬಳ ಕೊಡುತ್ತಿರುವವರು ನಾವು. ಆದ್ದರಿಂದ, ಅವರು ಹೇಳಿದ್ದಕ್ಕೆ ಮಾನ್ಯತೆ ಕೊಡಬಾರದು ಎಂದು DC ಗಳಿಗೆ ಈಗಲೇ ಫೋನ್ ಮಾಡಿ ಹೇಳಿ. ಈ ತಿಂಗಳು 22ಕ್ಕೆ exams ಇದೆ. ಇದಲ್ಲದೆ ಮುಂದೆ ಮಾರ್ಚ್ 13ರಿಂದ exams ಇವೆ. ದಯಮಾಡಿ ನೀವು ಅವರನ್ನು ಕರೆಸಬೇಕೆಂದು ಕೋರುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ–ಪೂರ್ವ):– ಮಾನ್ಯ ಅಧ್ಯಕ್ಷರೆ, ಈ ಸದನದ ಸದಸ್ಯರಾದ ಮಾನ್ಯ ಬಗಲಿಯವರ ಹಕ್ಕುಚ್ಯುತಿ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ. ಈ ಸದನದಲ್ಲಿ ಪ್ರತಿಪಕ್ಷದ ನಾಯಕರು ಒಳಗೊಂಡಂತೆ ಅನೇಕ ಸದಸ್ಯರು ಇದರ ಮೇಲೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ನಾವು ಭಾರತದ ದೇಶದಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತವನ್ನು ನಡೆಸುತ್ತಿದ್ದೇವೆ. ನಾವು ಪಾಕಿಸ್ತಾನದ ಮಾದರಿಯಂತೆ ಅಧ್ಯಕ್ಷೀಯ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಆದ್ದರಿಂದ ಚುನಾವಣಾ ಆಯೋಗದ ಆಯುಕ್ತರು ಈ ಒಂದು ಚುನಾವಣೆಯನ್ನು ಒತ್ತಾಯದಿಂದ ಒತ್ತಡ ಹೇರಿ ಮಾಡಿಬಿಟ್ಟರೆ, ಅವರೇನು ಟಿ.ಎನ್.ಶೇಷನ್ ಆಗಲಿಕ್ಕೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಆಯೋಗದ ಆಯುಕ್ತರು ಒತ್ತಾಯ ಮತ್ತು ಒತ್ತಡದ ವಾತಾವರಣದಲ್ಲಿ ಚುನಾವಣೆ ನಡೆಸುವುದಕ್ಕಿಂತಲೂ ಮಕ್ಕಳ ಪರೀಕ್ಷೆಗೆ ಹೆಚ್ಚು ಒತ್ತು ಕೊಡಬೇಕು. 2007ರ ಮೀಸಲಾತಿ ಬದಲಾಗಿ 2011ರ ಮೀಸಲಾತಿಯ ಆಧಾರದ ಮೇಲೆ ಚುನಾವಣೆಯನ್ನು ನಡೆಸಬೇಕು. ಹಿಂದುಳಿದ ವರ್ಗ, ಮಹಿಳೆಯವರು, ಪರಿಶಿಷ್ಟ ಪಂಗಡ/ಪರಿಶಿಷ್ಟ ವರ್ಗದವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕು. ಈ ಸದನದ ಸರ್ವ ಪಕ್ಷಗಳು ಅಂಗೀಕರಿಸಿರುವ ನಿರ್ಣಯಕ್ಕೆ ಮಾನ್ಯತೆಯನ್ನು ನೀಡಬೇಕು. ಈ ಸದನದ ಸರ್ವ ಪಕ್ಷಗಳ ನಿರ್ಣಯವನ್ನು ಧಿಕ್ಕರಿಸಿ ಚುನಾವಣೆ ಮಾಡಲಿಕ್ಕೆ ಮುಂದಾಗಬಾರದು ಎಂದು ಈ ಸಂದರ್ಭದಲ್ಲಿ ನಾನು ನನ್ನ ವೈಯಕ್ತಿಕ ಅಭಿಪ್ರಾಯವನ್ನು ಮಾನ್ಯ ಸಭಾಧ್ಯಕ್ಷರ ಮೂಲಕ ತಿಳಿಸುತ್ತೇನೆ. ಎಲ್ಲರ ಅಭಿಪ್ರಾಯದಂತೆ

ಆಯೋಗದ ಆಯುಕ್ತರನ್ನು ಕರೆಸಬೇಕು. ನಾವೂ ಕೂಡ ಜನಪ್ರತಿನಿಧಿಗಳಾಗಿರುವುದರಿಂದ ಮತ್ತು ಜನರೇ ನಮ್ಮನ್ನು ನೇರವಾಗಿ ಆಯ್ಕೆ ಮಾಡಿರುವುದರಿಂದ, ನಮ್ಮ ನಿರ್ಣಯಕ್ಕೆ ಮಾನ್ಯತೆ ಸಿಗಬೇಕು. ಈ ಸದನದ ಗೌರವಕ್ಕೆ ಇಲ್ಲಿಯವರೆಗೂ ಯಾರೂ ಧಕ್ಕೆ ಬರುವ ರೀತಿಯಲ್ಲಿ ನಡೆದುಕೊಂಡಿಲ್ಲ. ಈ ಆಯುಕ್ತರೂ ಕೂಡ ಅದನ್ನು ಗೌರವಿಸಬೇಕು ಎಂದು ಈ ಸಂದರ್ಭದಲ್ಲಿ ಈ ಸದನದಲ್ಲಿ ಒತ್ತಾಯ ಮಾಡುತ್ತೇನೆ. ಅವರನ್ನು ಸದನಕ್ಕೆ ಕರೆಸಿ ತಾಕೀತು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನೂ ಕೂಡ ಹೇಳುತ್ತೇನೆ.

ಶ್ರೀ ಸಿ.ಸಿ. ಪಾಟೀಲ್ (ನರಗುಂದಾ):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಬಗಲಿಯವರು ತಂದಿರುವಂತಹ ಹಕ್ಕುಚ್ಯುತಿ ನಿರ್ಣಯವನ್ನು ಬೆಂಬಲಿಸುತ್ತೇನೆ. ಚುನಾವಣಾ ಆಯೋಗದ ನಡವಳಿಕೆಗಳು, ಇವತ್ತಿನ ಮಾಧ್ಯಮವನ್ನು ನೋಡಿದಾಗ ಬಹಳ ವಿಚಿತ್ರವಾಗಿ ಕಂಡುಬರುತ್ತಿದೆ. ಮೇ ತಿಂಗಳಿನಲ್ಲಿ ನಾವು ಬಹುತೇಕ ವಿಧಾನ ಸಭೆ ಚುನಾವಣೆಯನ್ನು ಎದುರಿಸಲಿಕ್ಕೆ ಹೋಗುತ್ತಿದ್ದೇವೆ. ಆಗ ನಮ್ಮ ಶಿಕ್ಷಕರ ಮತ್ತು ಅಧಿಕಾರಿಗಳ ಬಳಕೆಯನ್ನು ನಾವು ಮಾಡಿಕೊಳ್ಳಬೇಕಾಗುತ್ತದೆ.

ಅದಕ್ಕಿಂತ ಪೂರ್ವ ಫೆಬ್ರವರಿ–ಮಾರ್ಚಿಯಲ್ಲಿ ಪುರಸಭೆ ಚುನಾವಣೆಯನ್ನು ಮಾಡಿದರೆ ನಮ್ಮ ಶಿಕ್ಷಕರನ್ನು ಬಳಕೆ ಮಾಡಿಕೊಳ್ಳಬೇಕಾಗುತ್ತದೆ. ಇಷ್ಟು ಸಣ್ಣ ಅವಧಿಯಲ್ಲಿ ಇಷ್ಟು ಅಧಿಕಾರಿಗಳನ್ನು ಬಳಕೆ ಮಾಡಿಕೊಂಡಾಗ ವಿದ್ಯಾರ್ಥಿಗಳ ಮತ್ತು ಪರೀಕ್ಷೆಗಳ ಮೇಲಾಗುವ ಪ್ರಭಾವವನ್ನು ಮಾನ್ಯ ಚುನಾವಣಾ ಆಯುಕ್ತರು ಗಮನದಲ್ಲಿಟ್ಟುಕೊಳ್ಳಬೇಕಾಗಿತ್ತು. ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಬಹಳ ವಿಸ್ತಾರವಾಗಿ ಇದರ ಬಗ್ಗೆ ಅನಾಲಿಸಿಸ್ ಮಾಡಿದ್ದಾರೆ, ನಾನು ಜಾಸ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಚುನಾವಣೆಯನ್ನು 2–3 ತಿಂಗಳು ಮುಂದೆ ಹಾಕುವುದರಿಂದ ಯಾವುದೇ ಪುರಸಭೆಯ ಅಭಿವೃದ್ಧಿ ಕಾಮಗಾರಿಗಳು ನಿಲ್ಲುವುದಿಲ್ಲ. ಆದರೆ ಪುರಸಭೆ ಚುನಾವಣೆಯನ್ನು ತರಾತುರಿಯಲ್ಲಿ ಮಾಡಿದಾಗ, ಏನು ಮೀಸಲಾತಿಗೆ

ವಂಚಿತರಾಗುವ ಸಮುದಾಯಗಳು, ವ್ಯಕ್ತಿಗಳು 5 ವರ್ಷ ಆ ವಂಚನೆಯಿಂದ ದೂರ ಉಳಿಯಬೇಕಾಗುತ್ತದೆ. 2–3 ತಿಂಗಳು ಮುಂದಕ್ಕೆ ಹಾಕಿದರೆ, ಪುರಸಭೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಬೇರೆ ವ್ಯವಸ್ಥೆಯ ಮೂಲಕ ನಾವು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಒಮ್ಮೆ ನಾವು ಚುನಾವಣೆಯನ್ನು ನಡೆಸಿದರೆ 5 ವರ್ಷಗಳ ಪರ್ಯಂತ ಆ ಮೀಸಲಾತಿ ಸೌಲಭ್ಯ ಸಿಗಬೇಕಾದ ಆ ಜನಾಂಗವನ್ನು ನಾವು ದೂರ ಇಟ್ಟಂಥ ಆಪಾದನೆ ಬರುತ್ತದೆ. ಸರ್ಕಾರ ಚುನಾವಣೆಗೆ ಹೆದರುವುದಿಲ್ಲ. ಯಾವುದೇ ಒಬ್ಬ ರಾಜಕಾರಣಿ ಚುನಾವಣೆಗೆ ಹೆದರುವಂಥ ಅನಿವಾರ್ಯತೆ, ಅವಶ್ಯಕತೆ ಇರುವುದಿಲ್ಲ. ಕ್ಷತ್ರಿಯನಿಗೆ ಯುದ್ಧ ಸದಾಚಾರ ಎನ್ನುವುದನ್ನು ಒಂದು ಶಾಸ್ತ್ರ ಹೇಳುತ್ತದೆ. ಒಬ್ಬ ರಾಜಕಾರಣಿಯೂ ಕೂಡ ಚುನಾವಣೆಗೆ ಎಂದೂ ಹೆದರುವುದಿಲ್ಲವೆನ್ನುವ ಮಾತನ್ನು ನಮ್ಮ ಸರ್ಕಾರ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಚುನಾವಣೆಯನ್ನು ನಡೆಸಬಾರದೆಂದು ನಾವು ಹೇಳುತ್ತಿಲ್ಲ. ಮೀಸಲಾತಿಗೆ ಒಳಪಡುವ ಜನಾಂಗಕ್ಕೆ ಮತ್ತು ಮಹಿಳೆಯರಿಗೆ ಆ ಸೌಲಭ್ಯ ಸಿಗಬೇಕೆನ್ನುವುದು ಸರ್ಕಾರದ ವಾದ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಿನ್ನೆಯ ದಿವಸ ಈ ಸದನ ಏನು ಸರ್ವಾನುಮತದ ನಿರ್ಣಯವನ್ನು ಮಾಡುತ್ತದೆ, ಆ ರೀತಿ ಮಾಡಿದ ಕೆಲವೇ ಕ್ಷಣಗಳಲ್ಲಿ ಮಾನ್ಯ ಚುನಾವಣಾ ಆಯುಕ್ತರು ಜಿಲ್ಲಾಧಿಕಾರಿಗಳಿಗೆ ಫ್ಯಾಕ್ಸ್ ಮುಖಾಂತರ ಮತ್ತು ಇ–ಮೇಲ್ ಮುಖಾಂತರ ಸಂದೇಶವನ್ನು ಕಳುಹಿಸುತ್ತಾರೆಂದರೆ, ಆ ಚುನಾವಣಾ ಆಯುಕ್ತರು, ಕರ್ನಾಟಕ ರಾಜ್ಯದ 6 ಕೋಟಿ ಜನರ ಭಾವನೆಗಳಿಗೆ ತಣ್ಣೀರನ್ನು ಎರಚಿದ್ದಾರೆ, ಅವರಿಗೆ ನೋವನ್ನುಂಟು ಮಾಡಿದ್ದಾರೆಂದು ನಾವು ಅರ್ಥೈಸಿಕೊಳ್ಳಬೇಕಾಗುತ್ತದೆ ಎನ್ನುವ ಭಾವನೆಯನ್ನು ಮಾನ್ಯ ಚುನಾವಣಾ ಆಯುಕ್ತರ ಗಮನಕ್ಕೆ ತರಬೇಕಾಗುತ್ತದೆ. ಆದರೆ ಅದೂ ಕೂಡ ಒಂದು ಸಂವಿಧಾನಾತ್ಮಕ ಸಂಸ್ಥೆಯಾಗಿರುವುದರಿಂದ ಸಂಘರ್ಷವನ್ನು ಹೊರತುಪಡಿಸಿ ತಾವು ತಮ್ಮ ಕೊಠಡಿಗೆ ಚುನಾವಣಾ ಆಯುಕ್ತರನ್ನು ಕರೆಯಿಸಿಕೊಂಡು ಸದನದ ರೀತಿನೀತಿಗಳ ಬಗ್ಗೆ, ಸದನಕ್ಕಿರಬಹುದಾದ ಪರಮಾಧಿಕಾರದ ಬಗ್ಗೆ ತಿಳಿಸಿ

ಹೇಳಿ ಚುನಾವಣೆಯನ್ನು ಮುಂದೂಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ಮಾನ್ಯ ಬಗಲಿಯವರು ತಂದಂತಹ ಹಕ್ಕುಚ್ಯುತಿ ನಿರ್ಣಯವನ್ನು ಬೆಂಬಲಿಸಿ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮ್ಮನ್ನು ಅಭಿನಂದಿಸುತ್ತೇನೆ.

ಶ್ರೀ ಎನ್.ಎಲ್. ನರೇಂದ್ರಬಾಬು(ಮಹಾಲಕ್ಷ್ಮಿ ಲೇಔಟ್): ಮಾನ್ಯ ಅಧ್ಯಕ್ಷರೇ, ಮಾನ್ಯ ಬಗಲಿಯವರು ಮಂಡಿಸಿರುವ ಹಕ್ಕುಚ್ಯುತಿ ನಿರ್ಣಯದ ಬಗ್ಗೆ ಸಹಮತ ವ್ಯಕ್ತಪಡಿಸುತ್ತಾ, ಇವತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಯಾಗಬಾರದೆನ್ನುವ ಇರಾದೆಯಾಗಲಿ ನಮ್ಮ ವಿರೋಧವಾಗಲಿ ಇಲ್ಲ. ಆದರೆ, ನಿನ್ನೆ ಇಲ್ಲಿ ಮಾತನಾಡಿದಾಗ ವ್ಯಕ್ತವಾದ ಅಭಿಪ್ರಾಯವನ್ನು ಧಿಕ್ಕರಿಸಿ, ಈ ಒಂದು ಸದನ ರಾಜ್ಯದ ಆಗುಹೋಗುಗಳ ಬಗ್ಗೆ, ವಿಶೇಷವಾಗಿ ಈ ಒಂದು ಸಂದಿಗ್ಧ ಸ್ಥಿತಿ, ನಾಳೆ ಮಾರ್ಚಿಯಿಂದ ನಡೆಯುವ ಪರೀಕ್ಷೆಗಳು ಒಂದು ಕಡೆ, ಎಸ್.ಎಸ್.ಎಲ್.ಸಿ. ಪರೀಕ್ಷೆ ಮತ್ತೊಂದು ಕಡೆ, ಎಲ್ಲಕ್ಕಿಂತ ಹೆಚ್ಚಾಗಿ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗ ಮತ್ತು ಮಹಿಳಾ ಮೀಸಲಾತಿ, ಇವೆಲ್ಲವನ್ನೂ ನಾವು ದೃಷ್ಟಿಯಲ್ಲಿಟ್ಟುಕೊಂಡು ಈ ಚುನಾವಣೆ ನಡೆಸುವುದು ಸೂಕ್ತವಾಗಿರುತ್ತದೆ. ಇದು ಈ ಒಂದು ಸದನದ ಸದಸ್ಯರ ಸಮಗ್ರ ಅಭಿಪ್ರಾಯವಾಗಿದೆ. ಈ ದೃಷ್ಟಿಯಿಂದ ಇಲ್ಲಿ ವಿಚಾರಮಂಥನ ಮಾಡಿ, ಈ ನಿರ್ಣಯವನ್ನು ಮಾಡಿರುವುದು. ಇಂಥ ನಿರ್ಣಯವನ್ನು ಕೇವಲ ಕ್ಷಣಾರ್ಧದಲ್ಲಿ ಇಲ್ಲಿಂದ communicate ಆದ ಕೂಡಲೇ ಜಿಲ್ಲಾಧಿಕಾರಿಗಳಿಗೆ ಮೀಸಲಾತಿ ಪಟ್ಟಿಯನ್ನು ಮಾಡಿ ಚುನಾವಣೆಯನ್ನು ನಡೆಸಿ ಎನ್ನುವ ಒಂದು ಸೂಚನೆ, ಎಲ್ಲೊ ಒಂದು ಕಡೆ ಉದ್ಧಟತನದ ಪರಮಾವಧಿ ಏನೋ ಎಂದು ಶಂಕೆ ಬರುತ್ತದೆ.Elections are the festivals of democracy ಎಂದು ಹೇಳುತ್ತಾರೆ. It should not become funerals of democracy. ಇಲ್ಲಿ ಹೊಸ ಮತದಾರರು, ಸಾಮಾಜಿಕ ನ್ಯಾಯದಡಿಯಲ್ಲಿ ಈಗಾಗಲೆ ಜಿಲ್ಲಾಪಂಚಾಯಿತಿ ಇರಬಹುದು, ಹಿಂದುಳಿದ ವರ್ಗದವರಿಗೆ ಬೇರೆಯವರಿಗೆ

ಅನ್ಯಾಯವಾಗಿರುವುದು ನಮ್ಮ ಕಣ್ಣ ಮುಂದಿದೆ. ಇಂಥ ದೃಷ್ಟಿಕೋನದಿಂದ ಬಹುಶಃ ತೆಗೆದುಕೊಂಡ ಈ ನಿರ್ಣಯವನ್ನು, ಇವತ್ತು ಏಕಾಏಕಿಯಾಗಿ ಬದಿಗೊತ್ತತಕ್ಕಂಥ ಎಲ್ಲೋ ಒಂದು ಕಡೆ ಕಡೆಗಣಿಸಿರತಕ್ಕಂಥದ್ದು ಈ ಸದನದ ಸದಸ್ಯನಾಗಿ ಬಹುಶಃ ನಿನ್ನೆ ಮಾತನಾಡಿಲ್ಲ. ಪತ್ರಿಕೆಯಲ್ಲಿ ಓದಿದ ತಕ್ಷಣ, ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ should work complementary to each other, not contradictory to each other. ಇವತ್ತು ಆಗಿರುವುದು ನಿಜವಾಗಿ ಶೋಭೆತರಕ್ಕಂಥದಲ್ಲ. ಉದಾಹರಣೆಗೆ ಬೆಂಗಳೂರು ಸಗರದಲ್ಲಿ ನನ್ನ ಸ್ನೇಹಿತರಾದ ಭಟ್ ಎನ್ನುವವರು ಪಿ.ಐ.ಎಲ್. ಹಾಕಿದರು. ಏತಕ್ಕೆ ಹಾಕಿದರೆಂದರೆ, ಬೆಂಗಳೂರು ನಗರದಲ್ಲಿ 10 ಲಕ್ಷ ಮತದಾರರು ಮತದಾನದಿಂದ ವಂಚಿತರಾಗಿದ್ದರು. ಅಷ್ಟು ಜನ ಮತದಾರರನ್ನು ಕೈಬಿಟ್ಟಿರುವುದನ್ನು ರಿಪ್ಲೈ ಕೊಟ್ಟಿರುವುದರಲ್ಲಿ ಒಪ್ಪಿಕೊಂಡಿದೆ. ಬಹುಶಃ ನಮ್ಮ ಪಾರ್ಲಿಮೆಂಟರಿ ಸಚಿವರಿಗೂ ಗೊತ್ತಿದೆ. ನನ್ನ ಕ್ಷೇತ್ರದಲ್ಲಿ 43,000 ಮತದಾರರು ಬಿಟ್ಟುಹೋಗಿದ್ದರು, ನಾನು ಗಲಾಟೆ ಮಾಡಿದ ಮೇಲೆ ಮೊನ್ನೆ 22,000 ಮತದಾರರು ಬಂದರು. ನಾನು ಏತಕ್ಕೆ ಈ ಮಾತನ್ನು ಉಲ್ಲೇಖ ಮಾಡುತ್ತೇನೆಂದರೆ ಹೇಗೋ ಏನೋ ಒಂದು ಕಡೆ ಚುನಾವಣೆಯಾಗಬೇಕು, ಚುನಾವಣೆ, ಸಂಜೆ ಹೊತ್ತಿಗೆ ಮೂರು ಮೊಳ ಎನ್ನುವಂತಾಗಬಾರದು. ಇದರಲ್ಲಿ ದೂರದೃಷ್ಟಿ ಮತ್ತು ನಾವು ಯಾವ ಈ ಡೆಮಾಕ್ರಸಿಯನ್ನು by the people, for the people, of the people ಎಂದು ಕರೆಯುತ್ತೇವೆ, ಇದು ಅಸ್ತಿತ್ವಕ್ಕೆ ಬರುವುದಾಗುತ್ತದೆ. ಈ ದೃಷ್ಟಿಯಿಂದ ತೆಗೆದುಕೊಂಡಿರುವ ನಿರ್ಧಾರಕ್ಕೆ ಬಹುಶಃ ವ್ಯತಿರಿಕ್ತವಾಗಿ ಮಾಡಿರುವುದು ಅಥವಾ ಸುಪ್ರೀಂ ಕೋರ್ಟಿನಿಂದ ಛೀಮಾರಿಯಾಗುತ್ತದೆನ್ನುವ ದೃಷ್ಟಿಯಿಂದ they should have taken this as defence. ಇದನ್ನು ಕಡೆಗಣಿಸಿರುವುದು ಶೋಭೆಯಲ್ಲ. ತಂದಿರುವ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದು ಸವದಿ (ತೇರದಾಳ): ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಚುನಾವಣಾ ಆಯೋಗವಿರುವ ಹಾಗೆ, ಇನ್ನು ನಾಲ್ಕಾರು ಆಯೋಗಗಳು ಇದ್ದಾವೆ, ಅವರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಂವಿಧಾನ ಬದ್ಧವಾಗಿ ಅಧಿಕಾರ ಕೊಟ್ಟಿದ್ದು ನಿಜ. ಆದರೆ ತನಗೆ ಸಂವಿಧಾನಬದ್ಧ ಅಧಿಕಾರವಿದೆ ಎಂದು ಜನವಿರೋಧಿ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಯಾರಿಗೂ ಅಧಿಕಾರವಿಲ್ಲ. ಉದಾಹರಣೆಗೆ, ನಮ್ಮ ಪೊಲೀಸ್ ಇಲಾಖೆಗೆ ನಾವು ಕಳ್ಳರನ್ನು ದುಷ್ಟರನ್ನು ಬಡಿಯಿರಿ ಎಂದು ದಂಡ ಕೊಟ್ಟಿದ್ದೇವೆ, ಜನರನ್ನು ಹೊಡೆದುಕೊಂಡು ಹೋಗಿ ಎಂದು ಕೊಟ್ಟಿಲ್ಲ. ಅದೇ ಪ್ರಕಾರ ನಮ್ಮಲ್ಲಿ KERC ಇದೆ, KERC ಅವರು ನಮಗೆ ಅಧಿಕಾರವಿದೆ ಎಂದು ಒಂದು ಯೂನಿಟ್‌ಗೆ ಒಂದು ರೂಪಾಯಿಗೆ ಹತ್ತು ರೂಪಾಯಿ ವಿದ್ಯುತ್ ಬಿಲ್ ಏರಿಸಿದರೆ, ಅದನ್ನು ಜಾರಿಗೆ ತರಬೇಕೆನ್ನುವ ನಿಯಮವಿಲ್ಲ. ಹಿಂದುಳಿದ ವರ್ಗದ ಆಯೋಗವಿದೆ, ಅವರು ಎಲ್ಲಾ ಜಾತಿಗಳನ್ನು SC/ST ಪಟ್ಟಿಗೆ ಸೇರಿಸಿ ಎಂದು ಆರ್ಡರ್ ಮಾಡುವ ಅಧಿಕಾರ ಅವರಿಗಿಲ್ಲ. ಆ ಕಾರಣಕ್ಕೆ ಚುನಾವಣಾ ಆಯೋಗ ಕೂಡ ಮಾನವೀಯತೆಯ ದೃಷ್ಟಿಯಿಂದ ನಮಗೇನು ಅನುಕೂಲವಾಗುತ್ತದೆ, ರಾಜ್ಯಕ್ಕೇನು ಅನುಕೂಲವಾಗುತ್ತದೆನ್ನುವ ನಿರ್ಣಯವನ್ನು ತರಬೇಕೇ ವಿನಃ, ಯಾವುದೊ ದ್ವೇಷ ಮನೋಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ರಾಜಕೀಯ ಕಾರಣಕ್ಕೆ ರಾಜಕೀಯ ಮನೋಭಾವನೆಯಿಂದ, ಈ ರೀತಿ ಎಲ್ಲರೂ ಅವಿರೋಧವಾಗಿ ಪಾಸ್ ಮಾಡಿರುವ ನಿರ್ಣಯಕ್ಕೆ ವ್ಯತಿರಿಕ್ತವಾಗಿ ಉದ್ಧಟತನದಿಂದ ನಡೆಯುವುದು ಸರಿಯಲ್ಲ. ಅವರಿಗೆ ಸರ್ಕಾರದ ಮೇಲೆ ಏನಾದರೂ ದ್ವೇಷವಿದ್ದರೆ 14ನೇ ತಾರೀಖು ನಿವೃತ್ತಿಯಾದ ಮೇಲೆ ಪಾರ್ಟಿ ಕಟ್ಟಿ ಎಲೆಕ್ಷನ್ ಮಾಡಲಿ, ಇವರನ್ನು ಸೋಲಿಸಿ ಅವರ ಕಾನೂನನ್ನು ಜಾರಿಗೆ ತರಲಿ. ಆದರೆ ಈ ನಿರ್ಣಯಕ್ಕೆ ವ್ಯತಿರಿಕ್ತವಾಗಿ ವಿರುದ್ಧವಾಗಿ, ಮಾನ್ಯ ಸದಸ್ಯರು ಆಗಲೇ ಹೇಳಿದಂತೆ ಈ ರೀತಿ ಮಾಡುವುದರಿಂದ ರಾಜ್ಯದಲ್ಲಿ ದೊಡ್ಡ ನಾಯಕನಾಗಿ ನಾನು ನಿಲ್ಲುತ್ತೇನೆ ಎನ್ನುವ ಮನೋಭಾವನೆಯಿಂದ ಈ ಪಕ್ಷಗಳನ್ನು, ಸರ್ಕಾರವನ್ನು ವಿರೋಧ ಮಾಡಿ ಜನರಿಗೆ ತೊಂದರೆಯಾಗುವಂಥ ಒಂದು

ನಿರ್ಣಯವನ್ನು ಮಾಡಬಾರದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ದೇಶದ ಕಾನೂನು ನಡೆಯುತ್ತಿರುವುದರಿಂದ ಈ ಬಹುಮತಕ್ಕೆ ವ್ಯತಿರಿಕ್ತವಾಗಿ ಏನು ಚುನಾವಣೆಯನ್ನು ಘೋಷಣೆ ಮಾಡುವ ಆತುರದಲ್ಲಿದ್ದಾರೋ ಅವರನ್ನು ತಡೆಯಬೇಕು, ಸದನಕ್ಕೆ ಅವರನ್ನು ಕರೆಯಿಸಿ ಈ ದೇಶದ ಕಾನೂನಿನ ಬಗ್ಗೆ ತಿಳುವಳಿಕೆ ಹೇಳಿ, ಈ ನಿರ್ಣಯಕ್ಕೆ ಒಪ್ಪಿಗೆಯಾಗುವ ಹಾಗೆ ಕಾನೂನಿನ ಚೌಕಟ್ಟಿನಲ್ಲಿ ನಾವ್ಯಾರು ಕೂಡ ಚುನಾವಣೆ ಬೇಡ, ಚುನಾವಣೆ ಮುಂದಕ್ಕೆ ಹಾಕಿ ಎಂದು ಹೇಳಿಲ್ಲ. ಆದರೆ ಮೀಸಲಾತಿಯ ಸಲುವಾಗಿ, ಕ್ಯಾಟಗರಿ ಸಲುವಾಗಿ ಸಮಯ ಕೇಳುತ್ತಿದ್ದೇವೆಯೇ ವಿನಃ ಚುನಾವಣೆ ಪೂರ್ತಿ ಮುಂದಕ್ಕೆ ಹಾಕಿ ಎಂದು ಹೇಳಿಲ್ಲ. ನಿಮಗೆ ಮೀಸಲಾತಿ ಪಟ್ಟಿಯನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಕೇವಲ 15 ದಿವಸ ಅವಕಾಶ ಕೊಡಿ ಎಂದು ಕೇಳಿದರೂ ಕೂಡ ಈ ರೀತಿ ಉದ್ಧಟತನದಿಂದ ವರ್ತನೆ ಮಾಡಿ ನಾನೇ ಹಿಟ್ಲರ್, ನಾನೇ ಸುಪ್ರೀಂ ಎನ್ನುವ ಅವರ ಮನೋಭಾವನೆ ಏನು ಇದೆಯೋ ಅದಕ್ಕೆ ಅವರನ್ನು ದಯಮಾಡಿ ತಾವು ಕರೆಯಿಸಿ ತಿಳುವಳಿಕೆ ಹೇಳಿ ಆ ರೀತಿಯಾಗಿ ಆಗುವುದನ್ನು ತಡೆಯಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ (ಪೌರಾಡಳಿತ ಸಚಿವರು): ಮಾನ್ಯ ಅಧ್ಯಕ್ಷರೆ, ಪೌರಾಡಳಿತ ಸಚಿವನಾಗಿ ಕೆಲವೊಂದು ವಿಚಾರವನ್ನು ಈ ಸದನದ ಗಮನಕ್ಕೆ ತರಬೇಕಾಗಿದೆ. ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಸಿದ್ದರಾಮಯ್ಯನವರು, ಡಾ: ಹೆಚ್.ಸಿ. ಮಹಾದೇವಪ್ಪನವರು ಮಾತನಾಡುವಾಗ ಕೆಲವೊಂದು ವಿಚಾರಗಳನ್ನು ಹೇಳಿದರು.

ಚುನಾವಣಾ ಆಯೋಗದವರನ್ನು ಸರ್ಕಾರ ಕರೆಸಿ ಚರ್ಚೆ ಮಾಡಬೇಕೆಂದು ಹೇಳಿದರು. ಮಾನ್ಯ ಅಧ್ಯಕ್ಷರೆ, ನಾನು ಈ ಸದನದ ಗಮನಕ್ಕೆ ತರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮುಖ್ಯ ಕಾರ್ಯದರ್ಶಿಗಳು ನಾಲ್ಕೈದು ಬಾರಿ ಚುನಾವಣಾ ಆಯೋಗದವರನ್ನು ಕರೆಸಿ ಎಲ್ಲಾ ವಿಚಾರಗಳನ್ನು ಅವರ ಜೊತೆ ಚರ್ಚೆ ಮಾಡಿದರೂ ಚುನಾವಣೆ ಮಾಡಬೇಕೆಂದು ಒಂದು ಹಠದಿಂದ ಹೋಗುತ್ತಿದ್ದಾರೆಂದು ನನ್ನ ಭಾವನೆಯಾಗಿದೆ. ನೆನ್ನೆ ಕೂಡ ಮಧ್ಯಾಹ್ನದವರೆಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಇಲ್ಲಿ ಬಂದು ಹೇಳಿ ಹೋಗಿ ತಾವು ಮಾಡುವ ಕೆಲಸ ಮಾಡುತ್ತಿದ್ದಾರೆ. ಇನ್ನು ಮುಂದೆ ಅವರನ್ನು ಕರೆಸಿ ಚರ್ಚೆ ಮಾಡುವುದರಲ್ಲಿ ಏನೂ ಅರ್ಥವಿಲ್ಲವೆಂದು ನನ್ನ ಭಾವನೆ. ನಾಲ್ಕೈದು ಸಾರಿ ಕರೆದು ಚರ್ಚೆ ಮಾಡಿದರೂ ಏನೂ response ಮಾಡದೆ ಚುನಾವಣೆ ಮಾಡಬೇಕೆಂದು ಹಠ ತೊಟ್ಟಿದ್ದಾರೆ. ಸುಪ್ರೀಂ ಕೋರ್ಟ್ ಆದೇಶದಲ್ಲಿ ಎಂದರೆ, ನಾಲ್ಕನೇ ತಾರೀಖಿನ ಒಳಗೆ ಸರ್ಕಾರ ಮೀಸಲಾತಿ ಪಟ್ಟಿಯನ್ನು ಕಡ್ಡಾಯವಾಗಿ ಕೊಡಲೇಬೇಕೆಂದು ಹೇಳುತ್ತದೆ. ಆದರೆ ಚುನಾವಣಾ ಆಯುಕ್ತರಿಗೆ ನೀವು ಚುನಾವಣೆ ಮಾಡಲೇಬೇಕೆಂದು ಎಲ್ಲಿಯೂ ಡೈರೆಕ್ಷನ್ ಕೊಟ್ಟಿಲ್ಲ. ಚುನಾವಣೆ ಮಾಡುವುದು ಬಿಡುವುದು ಅವರಿಗೆ ಬಿಟ್ಟಂತಹ ವಿಚಾರ. ಚುನಾವಣಾ ಆಯುಕ್ತರು interpret ಮಾಡಿ ರಾಜ್ಯದ ಜನತೆಗೆ ಈ ರೀತಿ Misguide ಮಾಡುತ್ತಿದ್ದಾರೆ. ಸರ್ಕಾರ ಅಥವಾ ಈ ಸದನದ ವತಿಯಿಂದ ಒಂದು ತಪ್ಪು ಸಂದೇಶವನ್ನು ರಾಜ್ಯದ ಜನತೆಗೆ ಕೊಡುತ್ತಿದ್ದಾರೆ. ಚುನಾವಣೆ ಮಾಡುವುದು ಬಿಡುವುದು ಅವರಿಗೆ ಬಿಟ್ಟ ವಿಚಾರ. ಸುಪ್ರೀಂ ಕೋರ್ಟ್ clear ಆಗಿ ಹೇಳುತ್ತಿದೆ. ತಾವು ಈ ಚುನಾವಣೆ ಮಾಡಬೇಕಾದರೆ ಒಂದು time frame ನಲ್ಲಿ ಸಂವಿಧಾನದ ಚೌಕಟ್ಟಿನಲ್ಲಿ ಹಾಗೂ ಕರ್ನಾಟಕ ಸರ್ಕಾರ ಮಾಡಿದ ಕಾನೂನು ವ್ಯಾಪ್ತಿಯಲ್ಲಿ ಚುನಾವಣೆ ಮಾಡಬೇಕೆಂದು ಹೇಳಿದಾಗ, 2007ರ ಪಟ್ಟಿ ಪ್ರಕಾರ ಚುನಾವಣೆ ನಡೆಸಿದರೆ ಅವರೇ ಸುಪ್ರೀಂ ಕೋರ್ಟಿನ ಆದೇಶವನ್ನು ಉಲ್ಲಂಘನೆ ಮಾಡಿದ ಹಾಗಾಗುತ್ತದೆ. ಅದನ್ನು ನಾವು ಪ್ರೂವ್ ಮಾಡುತ್ತೇವೆ. ಏಕೆಂದರೆ, ಅವರೇ ಈ ಆದೇಶವನ್ನು ಉಲ್ಲಂಘನೆ

ಮಾಡುತ್ತಾರೆ. ಇನ್ನೂ ಅನೇಕ ವಿಚಾರಗಳನ್ನು ನಾವು ನೆನ್ನೆ ಕೂಡ ಎಲ್ಲಾ ಪಕ್ಷಗಳ ಶಾಸಕರು ಹಾಗೂ ಮುಖಂಡರ ಜೊತೆಗೆ ಸತತವಾಗಿ ಚರ್ಚೆ ಮಾಡಿದ್ದೇವೆ. ಎಲ್ಲರೂ ಚುನಾವಣೆ ಮಾಡಬೇಕೆಂದು ಹೇಳುತ್ತಾರೆ. ಆದರೆ 2007ರ ಮೀಸಲಾತಿ ಪಟ್ಟಿ ಪ್ರಕಾರ ಚುನಾವಣೆ ಮಾಡಿದರೆ ಈ ರಾಜ್ಯದಲ್ಲಿರುವಂತಹ SC/ST ಹಾಗೂ ಹಿಂದುಳಿಧ ವರ್ಗದ ಜನಾಂಗದವರಿಗೆ ಭಾರೀ ಅನ್ಯಾಯ ಮಾಡಿದ ಹಾಗಾಗುತ್ತದೆ. ಮೊನ್ನೆ ಸುಪ್ರೀಂ ಕೋರ್ಟ್ ನೀಡಿದ ಆದೇಶವನ್ನು ಇಟ್ಟುಕೊಂಡು ಇವರು ಹೇಳುತ್ತಾರೆ. ಆದರೆ ಇದೇ ಸುಪ್ರೀಂ ಕೋರ್ಟಿನ ಲಾರ್ಜರ್ ಬೆಂಚ್‌ನ ಐದು ಜನ ಜಡ್ಜ್‌ಗಳು ರೊಟೇಷನ್ ಆಗಲೇಬೇಕೆಂದು ಹೇಳುತ್ತಾರೆ. ಐದು ವರ್ಷಗಳ ರೊಟೇಷನ್ ಕಂಪಲ್ಸರಿ ಎಂದು ಹೇಳಿರುವುದು ಅದೇ ಸುಪ್ರೀಂ ಕೋರ್ಟ್ ಆದೇಶ ಮಾಡಿದ ಹಾಗೆ. ಸನ್ಮಾನ್ಯ ಚುನಾವಣಾ ಆಯುಕ್ತರಾದ ಚಿಕ್ಕಮಠರವರು ಚುನಾವಣೆ ಮಾಡಲೇಬೇಕೆಂದು ಹಠ ಹಿಡಿದಿದ್ದಾರೆ. ಯಾವ ಉದ್ದೇಶದಿಂದ ಮಾಡುತ್ತಿದ್ದಾರೆಂದು ಗೊತ್ತಿಲ್ಲ. ಈ ಸದನದಲ್ಲಿ ಒಬ್ಬ ಸಚಿವನಾಗಿ ನಾನು ಹೇಳುತ್ತಿದ್ದೇನೆ. ತಾವು ಅವರನ್ನು ಇವತ್ತೇ ಕರೆಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ತಾವು ಅವರನ್ನು ಕರೆಸಲಿಲ್ಲವೆಂದರೆ, ನಾವು ಈ ಸದನದಲ್ಲಿ ಸಚಿವರಾಗಿ ಹಾಗೂ ಶಾಸಕರಾಗಿ ಮುಂದುವರೆಯುವುದಕ್ಕೆ ಹಕ್ಕು ಇಲ್ಲವೆಂದು ಹೇಳುತ್ತೇನೆ. ಏಕೆಂದರೆ ಅವರು ಈ ಸದನದ ಗೌರವವನ್ನು ಹಾಳು ಮಾಡಿದ್ದಾರೆ. ಅವರವರ ವ್ಯಾಪ್ತಿಗೆ ಅವರವರ ಅಧಿಕಾರ ಕೊಟ್ಟಿದ್ದಾರೆ. ಈ ಸಮಯದಲ್ಲಿ ನಮಗೆ ಇರುವ ಈ ಅಧಿಕಾರವನ್ನು ನಾವು ಚಲಾಯಿಸಲೇಬೇಕಾಗುತ್ತದೆ. ನಾನು ಈ ಇಲಾಖೆ ಸಚಿವನಾಗಿ ಹೇಳುತ್ತಿದ್ದೇನೆ. ಅವರು ಚುನಾವಣೆ ಮಾಡಲೇಬೇಕೆಂದರೆ, 2001ರ ಸೆನ್ಸಸ್ ಪ್ರಕಾರ ಮಾಡಬಾರದು, ಅವರಿಗೆ ಬೇಕಾದರೆ ಸರ್ಕಾರದವರು ಒಂದು ಪಟ್ಟಿ ಮಾಡಿದ್ದಾರೆ ಅದನ್ನು ರೊಟೇಷನ್ ಮಾಡಿ ಕೊಡುತ್ತೇವೆ. ಅದರಲ್ಲಿ 50% ಮಹಿಳೆಯರಿಗೆ ಕೊಡಬೇಕೆಂದು ಹೊಸ ಕಾನೂನು ಮಾಡಿದ್ದೇವೆ. ಅವರು ಸದನಕ್ಕೆ ಬಂದು ನಮಗೆ ಒಂದು ವಾರ ಸಮಯ ಕೊಡಲಿ ಆ ಪಟ್ಟಿಯನ್ನೂ ಇನ್ನೂ ಸರಿ ಮಾಡಿ ಕೊಡುತ್ತೇವೆ.

2007ರ ಪಟ್ಟಿ ಪ್ರಕಾರ ನಾವು ಚುನಾವಣೆ ನಡೆಸಿದರೆ ಬಹಳ ಅನ್ಯಾಯ ಮಾಡಿದ ಹಾಗಾಗುತ್ತದೆ. ದಯಮಾಡಿ ತಾವು ಅವರನ್ನು ಕರೆಸಬೇಕು, ಅವರು ಇಲ್ಲಿಯೇ ಸದನದಲ್ಲಿ ಉತ್ತರ ಕೊಡಬೇಕು. ಇರುವಂತಹ ಮೀಸಲಾತಿ ಪಟ್ಟಿಯನ್ನು ಇನ್ನೂ ಸರಿ ಮಾಡಿ ಕೊಡುವುದಕ್ಕೆ ಅವಕಾಶವಿದೆ. ಸುಪ್ರೀಂ ಕೋರ್ಟಿನ ಆದೇಶಕ್ಕೆ ನಾವು ಗೌರವ ಕೊಡುತ್ತೇವೆ. ಈ ದೇಶದ ಸಂವಿಧಾನ ಹಾಗೂ ಕಾನೂನಿಗೆ ಗೌರವ ಕೊಡುತ್ತೇವೆ. ಸನ್ಮಾನ್ಯ ಚುನಾವಣಾ ಆಯುಕ್ತರು ಅವರೂ ಗೌರವ ಕೊಡಬೇಕು. ಜನರಿಗೆ ಮಿಸ್‌ಗೈಡ್ ಮಾಡಿ ತಪ್ಪು ಸಂದೇಶ ಕೊಟ್ಟು ಮಾಡುವುದರಿಂದ ರಾಜ್ಯದ ಜನತೆಗೆ ತಪ್ಪು ಸಂದೇಶ ಹೋಗುತ್ತಿದೆ. ಅವರನ್ನು ಸದನಕ್ಕೆ ಕರೆಸಬೇಕೆಂದು ಒತ್ತಾಯ ಮಾಡಿ ನಾನು ಈ ಇಲಾಖೆಯ ಸಚಿವನ್ನಾಗಿ ಈ ಅಭಿಪ್ರಾಯವನ್ನು ಸದನಕ್ಕೆ ತಿಳಿಸಬೇಕೆಂದು ತಿಳಿಸಿದ್ದೇನೆ. ಧನ್ಯವಾದಗಳು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಬಹಳ ದಿವಸಗಳು ಕಳೆದ ಮೇಲೆ ಈ ಸದನದಲ್ಲಿ ಒಂದು ಮಹತ್ವದ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿದೆ. ಪ್ರಾಯಶಃ ಬಹಳ ಹಿಂದೆ ದಿ. ನಂಜೇಗೌಡರು ಇದ್ದಾಗ ಈ ರೀತಿ ಚರ್ಚೆ ಸಂದರ್ಭ ಬಂದೊದಗಿತ್ತು. ರಾಜ್ಯ ಚುನವಣಾ ಆಯೋಗ ಒಂದು ಸಂವಿಧಾನದ ಅಡಿಯಲ್ಲಿ ರಚನೆ ಆಗಿರುವ ಒಂದು ಆಯೋಗ. ಅದೇ ರೀತಿ ರಾಜ್ಯದ ವಿಧಾನ ಸಭೆ ಕೂಡ ಸಂವಿಧಾನದ ಅಡಿಯಲ್ಲಿ ರಚನೆ ಆಗಿರುವುದು. ಇವತ್ತು ಮಾನ್ಯ ಸದಸ್ಯರುಗಳಾದ ಅಭಯ್ ಪಾಟೀಲ್‌ರವರು, ಡಾ: ಸಾರ್ವಭೌಮ ಸಾತಗೌಡ ಬಗಲಿಯವರು ಹಾಗೂ ನಾಗರಾಜ್‌ರವರು ಮತ್ತು ಅನೇಕ ಶಾಸಕರು ಒಂದು ಹಕ್ಕು ಚ್ಯುತಿ ನಿರ್ಣಯವನ್ನು ಮಂಡಿಸಿದ್ದಾರೆ. ಒಟ್ಟಾರೆ ಎಲ್ಲರ ಅಭಿಪ್ರಾಯ ಸದನದಲ್ಲಿ ಯಾರೂ ಕೂಡ ಚುನಾವಣೆ ವಿರುದ್ಧ ಅಲ್ಲ. ಚುನಾವಣೆ ಯಾವಾಗ ಮಾಡಬೇಕು, ಹೇಗೆ ಮಾಡಬೇಕೆಂಬುದು ಇವತ್ತು ನಮ್ಮ ಮುಂದಿರುವ ಪ್ರಶ್ನೆ. ಮಾನ್ಯ ನರೇಂದ್ರಬಾಬುರವರು ಇದ್ದಾರೆ, ನಾನು ಅನೇಕರು ಇಲ್ಲಿ ಆ ಸ್ಥಳೀಯ

ಸಂಸ್ಥೆಗಳ ಚುನಾವಣೆಯಲ್ಲಿ ಗೆದ್ದು ಅಲ್ಲಿ ಒಂದು ತಾಲೀಮು ಮಾಡಿ ಇವತ್ತು ಇಲ್ಲಿಗೆ ಬಂದಿದ್ದೇವೆ. ಚುನಾವಣೆ ಆಗಬೇಕು. ಆದರೆ ಪ್ರಶ್ನೆ ಇರುವುದು, ಯಾವ ಆಧಾರದ ಮೇಲೆ ಚುನಾವಣೆ ಮಾಡಬೇಕೆಂಬುದು ಇವತ್ತು ನಮ್ಮ ಮುಂದಿರುವ ಪ್ರಶ್ನೆ. ನೆನ್ನೆ ತಾನೆ ನಮ್ಮ ಸದನದಲ್ಲಿ ಸರ್ವಾನುಮತದ ಒಂದು ನಿರ್ಣಯವನ್ನು ನಾವು ಇಲ್ಲಿ ಮಾಡಿ ಅದನ್ನು ಚುನಾವಣಾ ಆಯೋಗಕ್ಕೆ ಕಳಹಿಸಿದ್ದೇವೆ. ಆ ನಿರ್ಣಯದಲ್ಲಿ ಹೇಳಿರುವುದು ರಾಜ್ಯ ಚುನಾವಣಾ ಆಯೋಗವು 2001ರ ಜನಗಣತಿ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಉದ್ದೇಶಿಸಿರುತ್ತದೆ. ಇವತ್ತು ಯಾವುದೇ ರೀತಿಯ ಮೀಸಲಾತಿ ಇರಬಹುದು, ಜನಸಂಖ್ಯೆ ಆಧಾರದ ಮೇಲೆ ಮಾಡಬೇಕು. ಜನಸಂಖ್ಯೆ ಎಂದರೆ ಏನು? ಇವತ್ತಿನ ಜನಸಂಖ್ಯೆ. ಇವತ್ತಿನ ಜನಸಂಖ್ಯೆ ಎಂದರೆ ಏನು? ನಮಗೆ ಲೇಟೆಸ್ಟ್ ಇರುವುದು 2011ರ ಸೆನ್ಸಸ್‌ನ ವರದಿ. ಈಗಾಗಲೇ 2011ರ ಜನಗಣತಿ ಕಾರ್ಯ ಪೂರ್ಣಗೊಂಡಿದ್ದು, ಅದರ ಆಧಾರದ ಮೇಲೆ ವಾರ್ಡ್‌ಗಳ ಮೀಸಲಾತಿಯಲ್ಲಿ ಬದಲಾವಣೆ ಆಗುವುದರಿಂದ, ಬಹಳಷ್ಟು ಬದಲಾವಣೆ ಆಗುತ್ತದೆ. ಹಲವಾರು ಸ್ಥಳೀಯ ಸಂಸ್ಥೆಗಳು ನಗರಪಾಲಿಕೆ, ನಗರಸಭೆಗಳಾಗಿ ಬಡ್ತಿ ಹೊಂದಲು ಅರ್ಹತೆ ಹೊಂದಿರುವುದರಿಂದ, 40ಕ್ಕಿಂತ ಹೆಚ್ಚು ಪುರಸಭೆಗಳು ನಗರಸಭೆಗಳಾಗುತ್ತವೆ. ಮೂರು ನಗರಸಭೆಗಳು ಕಾರ್ಪೋರೇಷನ್‌ಗಳಾಗುತ್ತಿವೆ. ಇನ್ನು ಪಟ್ಟಣ ಪಂಚಾಯಿತಿಗಳು ಪುರಸಭೆಗಳಾಗುತ್ತಿರುವ ದೊಡ್ಡ ಪಟ್ಟಿ ಇದೆ. ಸರ್ಕಾರದ ಮೀಸಲಾತಿ ಕಾನೂನುಗಳಲ್ಲಿಯೂ ಬಹಳಷ್ಟು ತಿದ್ದುಪಡಿಗಳಾಗಿವೆ. ಬಹಳಷ್ಟು ಮುಖ್ಯವಾದ ವಿಚಾರವೇನೆಂದರೆ, ಇವತ್ತು ಮಹಿಳೆಯರಿಗೆ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಲ್ಲಿ ಯಾವ ರೀತಿ 50% ಮೀಸಲಾತಿ ಕೊಟ್ಟಿದ್ದೇವೆ ಹಾಗೆಯೇ ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 50% ರಷ್ಟು ಮೀಸಲಾತಿ ಕೊಟ್ಟಿದ್ದೇವೆ. ಆ ರೀತಿ ಕಾನೂನಿಗೆ ನಾವೆಲ್ಲಾ ಅಂಗೀಕಾರ ಮಾಡಿ ರಾಜ್ಯಪಾಲರ ಅನುಮೋದನೆ ಪಡೆದು ಅದು ಈ ನೆಲದ ಕಾನೂನಾಗಿದೆ. ಆದ್ದರಿಂದ ನ್ಯಾಯಯುತ ಚುನಾವಣೆ ನಡೆಸಲು ಮತ್ತು ಎಲ್ಲಾ ವರ್ಗದವರಿಗೂ ನ್ಯಾಯ ಒದಗಿಸಲು

ಅನುವಾಗುವಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡುವಂತೆ .ಈ ಸದನವು ರಾಜ್ಯ ಚುನಾವಣಾ ಆಯೋಗವನ್ನು ಒತ್ತಾಯಿಸುತ್ತದೆ ಎಂದು ಸರ್ವಾನುಮತದಿಂದ ಇದನ್ನು ಅಂಗೀಕರಿಸಿ ಕಳುಹಿಸಿದ್ದೇವೆ. ಆದರೆ ಅವರು ಇವತ್ತು ಮತ್ತೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಇದನ್ನು ಅವರು ಗಣನೆಗೆ ತೆಗೆದುಕೊಂಡಿಲ್ಲ. with all the contempt ಎಂದು ಆ ರೀತಿ ಇವತ್ತು ಅವರು ತೋರಿಸಿದ್ದಾರೆ. ನನಗನ್ನಿಸುವುದು ಇದು ಸದನದ ಹಕ್ಕುಚ್ಯುತಿ ಆಗಿರುವುದಕ್ಕಿಂತ ನಾಗರಿಕರ ಹಕ್ಕುಚ್ಯುತಿ ಆಗಿದೆ. ಯಾರು ಮೀಸಲಾತಿಯಲ್ಲಿ ಹೆಚ್ಚು ಸ್ಥಾನಗಳನ್ನು ತೆಗೆದುಕೊಳ್ಳುತ್ತಾರೆ, ಯಾವ ನಗರಸಭೆಗಳು ನಗರಪಾಲಿಕೆಗಳಾಗುತ್ತವೆ, ಯಾವ ಪುರಸಭೆಗಳು ನಗರಸಭೆಗಳಾಗುತ್ತವೆ, ಆ ಹಕ್ಕನ್ನು ಚ್ಯುತಿಗೊಳಿಸುವುದಕ್ಕೆ.. ಮೊಟಕುಗೊಳಿಸುವುದಕ್ಕೆ ಇವತ್ತು ಪ್ರಯತ್ನ ನಡೆಯುತ್ತಿದೆ. 2001ನೇ ಇಸವಿಯ ಸೆನ್ಸಸ್ ಆಧಾರದ ಮೇಲೆ ಚುನಾವಣೆ ನಡೆದಿತ್ತು. ಅವರ ಹತ್ತಿರ 2007ರ ಒಂದು ಪಟ್ಟಿ ಇದೆ, ಅದೇ ಆಧಾರದ ಮೇಲೆ ಚುನಾವಣೆ ನಡೆಯುತ್ತದೆ ಎಂದು ಹೇಳಿದ್ದಾರೆ. ಈಗಾಗಲೇ ನಾವು 2013ಕ್ಕೆ ಬಂದಿದ್ದೇವೆ. 2010ನೇ ಇಸವಿಯಲ್ಲಿ ಇದು ಚರ್ಚೆಯಾಗಿದೆ. ಮುಂದಿನ ವರ್ಷ ಸೆನ್ಸಸ್ ವರದಿ ಬಂದು ಬಿಡುತ್ತದೆ, ಅದಕ್ಕೋಸ್ಕರ ಚುನಾವಣೆ ಮುಂದಕ್ಕೆ ಹಾಕಿ ಎಂದರೆ ನಮ್ಮದೂ ತಪ್ಪಾಗುತ್ತದೆ. 2011 ಆಗಿ ಹೋಗಿದೆ. 2011 ಆಗಿ, 2012 ಆಗಿ, 2013ರಲ್ಲಿ ನಾವು ಇದ್ದೇವೆ. ಆ ಸೆನ್ಸಸ್ ಅನ್ನು ರಿಜಿಸ್ಟ್ರಾರ್‌ರವರೇ ಹೋಗಿ ಸುಪ್ರೀಂ ಕೋರ್ಟಿನಲ್ಲಿ ಹೇಳಿದ್ದಾರೆ. ಏಪ್ರಿಲ್ 30ನೇ ತಾರೀಕು ನಾವು ವಾರ್ಡ್‌ವೈಸ್ ಎಲ್ಲಾ ಮೀಸಲಾತಿ ಯಾವ್ಯಾವ ಕಮ್ಯುನಿಟಿಗೆ ಎಷ್ಟೆಷ್ಟು ಇದೆ ಎಂದು ಮಾಹಿತಿ ಕೊಡುತ್ತೇವೆಂದು ಅಫಿಡವಿಟ್ ಸಲ್ಲಿಸಿದ್ದಾರೆ. ಮೂರನೆಯದು ಬಹಳ ಮುಖ್ಯವಾದುದು ಚುನಾವಣಾ ಆಯೋಗ ಕೂಡ ತನ್ನ ಹಕ್ಕನ್ನು ಪ್ರತಿಪಾದಿಸುವ ಜೊತೆಗೆ ಇನ್ನೊಂದು ಸಂವಿಧಾನಾತ್ಮಕ ಸಂಸ್ಥೆಯ ಗೌರವವನ್ನೂ ಕೂಡ ಅವರು ಗಮನಿಸಬೇಕು. ಆಗಲೇ ಮಾನ್ಯ ಸದಸ್ಯರಾದ ಜಯಚಂದ್ರರವರು Legislature Vs Election Commission ಮಹಾರಾಷ್ಟ್ರದ ಒಂದು ಘಟನೆಯನ್ನು ಇಲ್ಲಿ ಉಲ್ಲೇಖ

ಮಾಡಿದ್ದಾರೆ. ``Maharastra Legislature created history on March 29 by sending a constitutional officer, state's Chief Electoral Officer, Nand Lal to jail for committing breach of privilege of the House. This unpleasant incident has all makings of a fight between the sovereign Legislature and an autonomous Election Commission. A delegation of Chief Electoral Cfficers from different states is to call on the president of India shortly that may highlight the crisis on a wider canvas"

When two elephants fight, it is not the elephants that suffer, it is the grass under them that suffer ಅಂತ ಹೇಳುತ್ತಾರೆ. ಇದು ಬಹಳ ಮುಖ್ಯವಾದ ಒಂದು ಪ್ರಶ್ನೆಯಾಗಿದೆ. ಆದರೆ ಕೊನೆಗೆ ಒಂದು sentence ಇದೆ, ``The point is that there is a limit to defiance, mutual hatred and also the powers of the democratic institutions, (Ours is a democratic institution) when they are required to deal with each other" ನಾವು ಚುನಾವಣಾ ಆಯೋಗದ ಜೊತೆ ವ್ಯವಹರಿಸುವಾಗ ಮತ್ತು ಅವರು ನಮ್ಮ ಜೊತೆ ವ್ಯವಹರಿಸುವಾಗ, ಹೀಗೆ ಇಬ್ಬರೂ ಕೂಡ ಗೌರವ ಕೊಟ್ಟು ನಾವುಗಳು ವ್ಯವಹರಿಸಬೇಕಾಗುತ್ತದೆ. ನಿನ್ನೆ ನಾವು ಇಲ್ಲಿ ಸರ್ವಾನುಮತದ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಜಯಚಂದ್ರರವರು ಸೇರಿದಂತೆ ಹಲವಾರು ಸದಸ್ಯರುಗಳು ಸದನದಲ್ಲಿ ಏನೇನು ವಿಚಾರಗಳನ್ನು ಮಂಡಿಸಿದ್ದಾರೆ ಅದೆಲ್ಲವನ್ನೂ ನಾವು ಅವರಿಗೆ ತಿಳಿಸಿದ್ದೇವೆ. ಸುಪ್ರೀಂ ಕೋರ್ಟ್‌ನಲ್ಲಿಯೂ ಕೂಡ ತಿಳಿಸಿದ್ದೇವೆ. ಹೈಕೋರ್ಟ್‌ನಲ್ಲಿಯೂ ಕೂಡ ತಿಳಿಸಿದ್ದೇವೆ. ಹೀಗಿದ್ದರೂ ಅವರು ನಾವು ಹೋಗಿದ್ದೇ ದಾರಿ ಎನ್ನುವ ರೀತಿಯಲ್ಲಿ ಇವತ್ತು ನಡೆದುಕೊಂಡಿದ್ದಾರೆ. ಇದು ಸದನದ ಗೌರವದ ಪ್ರಶ್ನೆಯಾಗಿದೆ. ಯಾರೋ ಒಬ್ಬ ಸದಸ್ಯರು ಹೇಳಿರುವಂಥದ್ದಲ್ಲ. ಇಡೀ ಸದನ ಬಹಳ ಗಂಭೀರವಾದಂಥ

ಕಾರಣಗಳಿಂದಾಗಿ ನಿರ್ದಿಷ್ಟ ಆಧಾರದಿಂದ ಈ ಚುನಾವಣೆಯನ್ನು 2001ರ ಜನಗಣತಿಯ ಆಧಾರದ ಮೇಲೆ ಮಾಡುವುದು ಬೇಡ, 2011ರ ಜನಗಣತಿಯ ಆಧಾರದಲ್ಲಿ ಮಾಡೋಣವೆಂದು ಹೇಳಿದೆಯೆಂದು ಪರಿ ಪರಿಯಾಗಿ ನಾವು ಅವರಿಗೆ ತಿಳಿಸಿದ್ದೇವೆ. ಈಗಾಗಲೇ ಮಾನ್ಯ ಜಾರಕಿಹೊಳಿಯವರು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಗ್ಗೆ ಬಹಳ ಸ್ಪಷ್ಟವಾಗಿ ಎರಡು ವಿಚಾರಗಳನ್ನು ಇಲ್ಲಿ ತಿಳಿಸಿದ್ದಾರೆ. ವಿಶೇಷವಾಗಿ ``In view of these circumstances, we are clearly of the view that the State Election Commission is within its right to proceed with the Elections within the time frame as required by the Constitution and the State enactments ಎಂದು ಅದರಲ್ಲಿ ಇದೆ. ನಾವು ಏನು ಮಹಿಳೆಯರಿಗೆ ಶೇಕಡ 50 ರಷ್ಟು ಎಂದು ಮೀಸಲಾತಿಯನ್ನು ಮಾಡಿದೇವೋ ಅದೂ ಕೂಡ state enactment. ಅದಕ್ಕೆ ಗೌರವವನ್ನು ಕೊಡುವ ಕೆಲಸವನ್ನು ಅವರು ಮಾಡಬೇಕಾಗುತ್ತದೆ. ಮಾನ್ಯ ಜಾರಕಿ ಹೊಳಿಯವರು ಹೇಳಿರುವುದರಲ್ಲಿ ಬಹಳ ಮುಖ್ಯವಾದದ್ದೆಂದರೆ State Government should furnish its proposal to the State Election Commission on or before the 4th February, 2013. In the event, the State Government does not furnish the information by that date, it would be open to the State Election Commission to proceed on the basis of the reservation of seats as are presently existing. ಅವರು ಮಾಡಬಹುದು, ಮಾಡದೇ ಇರಬಹುದು. ಈ ರೀತಿ ಮಾಡಬಹುದು ಅಥವಾ ಮಾಡದೇ ಇರಬಹುದು ಎಂಬುದು ಬಂದಾಗ, ಅವರು ಮಾಡುವಾಗ ಕೆಲವನ್ನೆಲ್ಲ ಅನುಸರಿಸಿ, ಮಾಡಬೇಕು. ಸದನದ ಭಾವನೆಯನ್ನೂ ಕೂಡ ಅವರು ಗೌರವಿಸಬೇಕು. ಇದರ ಜೊತೆಗೆ ವಾಸ್ತವಿಕ ಅಂಶಗಳನ್ನು ಅವರು ಗಮನಿಸಬೇಕು. ನಾವೆಲ್ಲರೂ ಈಗಾಗಲೇ ಎಲ್ಲ ವಾಸ್ತವಿಕ ಅಂಶಗಳನ್ನು ತಿಳಿಸಿದ್ದೇವಲ್ಲದೆ ಇದನ್ನು ಮತ್ತೆ ಮತ್ತೆ

ಪ್ರತಿಪಾದಿಸುತ್ತಿದ್ದೇವೆ. ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಸರ್ಕಾರದ ಕಡೆಯಿಂದ ನಮ್ಮೆಲ್ಲ ನಿಲುವನ್ನು ತಿಳಿಸಿದ್ದೇವೆ. ಸದನ ತಿಳಿಸಿದೆ. ಆದರೂ ಕೂಡ ಇವತ್ತು ನಾವು ಮುಂದೆ ಹೋಗುತ್ತೇವೆಂದು ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸುವ ಒಂದು ಪ್ರಯತ್ನ ನಡೆಯುತ್ತಿದೆ. ಶಿಕ್ಷಣ ಇಲಾಖೆಯ ಅಧಿಕಾರಿಗಳು ಫೆಬ್ರವರಿ 22 ರಿಂದ ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಪರೀಕ್ಷೆಗಳು ಪ್ರಾರಂಭವಾಗುತ್ತಿದೆಯೆಂದು ನಮಗೆ ತಿಳಿಸಿದ್ದಾರೆ. ಫೆಬ್ರವರಿ 22 ರಿಂದ ವಿವಿಧ ಹಂತದ ಪರೀಕ್ಷೆಗಳು ಪ್ರಾರಂಭವಾಗುತ್ತಿವೆ. ಅದು ಏಪ್ರಿಲ್ 10ನೇ ತಾರೀಖು ಎಸ್.ಎಸ್.ಎಲ್.ಸಿ ಪರೀಕ್ಷೆಯೊಂದಿಗೆ ಅದು ಮುಗಿಯುತ್ತದೆಂದು ಹೇಳಿದ್ದಾರೆ. ಟೀಚರ್ಸ್ ಮಕ್ಕಳ ಪರೀಕ್ಷೆಗಳನ್ನು ನಡೆಸಬೇಕೋ ಅಥವಾ ಪರವಾಗಿಲ್ಲ ಮಕ್ಕಳು ಹೇಗಾದರೂ ಹೋಗಲಿ, ನಮಗೆ ಚುನಾವಣಾ ಕಾರ್ಯಕ್ಕಾಗಿ ಕರೆ ಬಂದಿದೆಯಾದ ಕಾರಣ ಚುನಾವಣಾ ಕಾರ್ಯವನ್ನು ಮಾಡೋಣವೆಂದು ಹೇಳಬೇಕೋ? ನಿಜ, ಚುನಾವಣಾ ಕಾರ್ಯಕ್ಕೆ ಅವರಿಗೆ ಕರೆ ಕೊಡಬಹುದು. ಅವರೂ ಕೂಡ ಚುನಾವಣಾ ಕಾರ್ಯವನ್ನು ಮಾಡುತ್ತಾರೆ. ಆದರೆ ವಾಸ್ತವಿಕ ಅಂಶವೇನೆಂದರೆ, ಫೆಬ್ರವರಿ 22ನೇ ತಾರೀಖಿನಿಂದ ಪರೀಕ್ಷೆಗಳು ನಡೆಯುತ್ತಿವೆ. ಪರೀಕ್ಷೆಯೂ ಕೂಡ ಮಕ್ಕಳಿಗೆ ಚುನಾವಣೆಯೇ ಆಗಿದೆ. ಚುನಾವಣೆಯೂ ಕೂಡ ರಾಜಕೀಯ ಪಕ್ಷಗಳಿಗೆ ಪರೀಕ್ಷೆಯೇ ಆಗಿದೆ. ಈ ಎರಡೂ ಪರೀಕ್ಷೆಗಳ ನಡುವೆ ಇವತ್ತು ಬಹಳ ಮುಖ್ಯವಾದುವುದು ಆ ಮಕ್ಕಳ ಪರೀಕ್ಷೆ. ಆದಕಾರಣ ಸರ್ಕಾರದ ಕಡೆಯಿಂದ ಸದನದ ಭಾವನೆಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡು ಸಂಪೂರ್ಣವಾಗಿ ಸಹಮತ ವ್ಯಕ್ತಪಡಿಸುತ್ತಾ ನಾನು ತಿಳಿಸುವುದೇನೆಂದರೆ, ಸದನದ ಸಭಾಧ್ಯಕ್ಷರಾಗಿ As a custodian of this House, ತಾವು ಇದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಂಡು ಚುನಾವಣಾ ಆಯೋಗದ ಆಯುಕ್ತರನ್ನು ನೀವು ಕರೆಸಿ ಎಲ್ಲಾ ಪ್ರಮುಖಸ್ಥರ ಮುಂದೆ ವಿಚಾರ ನಡೆಯಲಿ. Actually ನಾವು ಏಕೆ ಮಾಡುತ್ತಿದ್ದೇವೆ? It is not as if we are confronting. ನಾವು ಚುನಾವಣೆಯನ್ನೇ ಮಾಡಬಾರದು, ಚುನಾವಣಾ ಆಯೋಗ ಮುಂದಕ್ಕೇ ಹೋಗಬಾರದು ಎಂದು ಹೇಳುತ್ತಿಲ್ಲ.

ಈ ಒಂದು ಅಂಶಗಳ ಬಗ್ಗೆ ಅವರೂ ಕೂಡ, let them be reasonable. ಸಭಾಧ್ಯಕ್ಷರೆ, ಕೊನೆಯದಾಗಿ ನಾನು ಹೇಳಿಬಿಡುತ್ತೇನೆ. Free and Fair Election ಎಂದು ಎಲ್ಲ ಕಡೆಯಲ್ಲಿಯೂ ಹೇಳುತ್ತೇವೆ, free election ಎಂದರೆ ನನಗೆ ಅರ್ಥವಾಗುತ್ತದೆ ಆದರೆ fair election ಎಂದರೆ ಏನು? ಇದು ಬಹಳ ಮುಖ್ಯವಾಗಿದೆ. ನ್ಯಾಯಯುತವಾಗಿ ನಡೆಸಬೇಕಾದ ಚುನಾವಣೆ ಎಂದೇ fair election ಎನ್ನುವ ಅರ್ಥವಾಗಿದೆ. ಆ ಚುನಾವಣೆಯನ್ನು ನ್ಯಾಯಯುತವಾಗಿ ನಡೆಸಬೇಕಾದರೆ ಯಾರು ಯಾರಿಗೆ ಹಕ್ಕು ಬರುತ್ತದೋ, ಯಾವ ಯಾವ ನಗರ ಸಭೆಗಳಿಗೆ ನಗರಪಾಲಿಕೆಗಳಾಗುವ ಹಕ್ಕು ಬರುತ್ತದೋ, ಮೀಸಲಾತಿಯಿಂದ ಶೇಕಡ 50 ರಷ್ಟು ಮಹಿಳೆಯರಿಗೆ ಅವಕಾಶ ಸಿಗುತ್ತದೋ ಅದನ್ನು ಕೂಡ ಅನುಸರಿಸಿಕೊಂಡು ಚುನಾವಣೆಯನ್ನು ಮಾಡುವುದು fair election ಆಗುತ್ತದೆ. ಈ ದೃಷ್ಟಿಯಿಂದ ಸದನದ ಸಭಾಧಕ್ಷರಾದ ತಮ್ಮ ಮೇಲೆ ಈ ಸದನ ಸಂಪೂರ್ಣವಾಗಿ ವಿಶ್ವಾಸವಿಟ್ಟಿದೆ. ಈ ವಿಚಾರದಲ್ಲಿ ಸಂಪೂರ್ಣ ಅಧಿಕಾರ ನಿಮಗಿದೆ. ಆ ಅಧಿಕಾರವನ್ನು ನಾವು ಇನ್ನೂ ಹೆಚ್ಚುಗೊಳಿಸುತ್ತಿದ್ದೇವೆ. ತಾವು ಚುನಾವಣಾ ಆಯೋಗದ ಆಯುಕ್ತರನ್ನು ಕರೆಸಿ ಸದನದ ಭಾವನೆಯನ್ನು ಅವರಿಗೆ ತಿಳಿಸಿ ಯಾವುದೇ ಕಾರಣದಿಂದ ಚುನಾವಣೆಯನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿರುವ ಸದನದ ಭಾವನೆಯನ್ನು ಅವರಿಗೆ ತಿಳಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ವಿಧಾನಸಭಾ ಸದಸ್ಯರಾದ ಮಾನ್ಯ ಅಭಯ್ ಪಾಟೀಲ್, ಮಾನ್ಯ ಗೋಪಾಲಕೃಷ್ಣ ಬೇಳೂರು ಮತ್ತು ಇತರರು ತಾರೀಖು 05–02–2013ರಂದು ವಿಧಾನ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿದ್ದರು. ಈ ನಿರ್ಣಯದ ಮೇಲೆ ಸಾಕಷ್ಟು ಚರ್ಚೆಗಳಾದ ಮೇಲೆ ಇಡೀ ಸದನ ಸರ್ವಾನುಮತದ ನಿರ್ಣಯವನ್ನು ತೆಗೆದುಕೊಂಡಿದ್ದು ಈಗಾಗಲೇ ಚುನಾವಣಾ ಆಯೋಗಕ್ಕೆ ಕಳುಹಿಸಿದೆ. ತಾವೇನು ಇವತ್ತು ನಿರ್ಧಾರವನ್ನು ಕೈಗೊಂಡಿದ್ದೀರಿ ಅದು ಇವತ್ತು ರಾಜ್ಯ ಸರ್ಕಾರ ಏನು ಮೀಸಲಾತಿ ಬಗ್ಗೆ ಕಾನೂನು ಉಲ್ಲಂಘಟನೆಯಾಗಿದೆ. ಹಾಗೆಯೇ ಇವತ್ತು ಸಾಮಾಜಿಕ ನ್ಯಾಯ

ಒದಗಿಸುವಲ್ಲಿ ಈ ರೀತಿ ಚುನಾವಣೆಯನ್ನು ಮಾಡಿದರೆ ನಾವು ಒಂದು ವರ್ಗಕ್ಕೆ ಅನ್ಯಾಯ ಮಾಡಿದಂತಾಗುತ್ತದೆ ಎನ್ನುವಂಥದ್ದನ್ನು ತಿಳಿಸಿ ಸದನದ ನಿರ್ಣಯವನ್ನು ಕಳುಹಿಸಿದ್ದರೂ ಕೂಡ ಚುನಾವಣಾ ಆಯೋಗ ಇಡೀ ಸದನದ ನಿರ್ಣಯಕ್ಕೆ ಯಾವುದೇ ಗೌರವವನ್ನು ಕೊಡದೆ, ಈಗ ತಾನೆ ಪತ್ರಿಕೆ ಮತ್ತು ಸರ್ಕಾರದ ಕಡೆಯಿಂದ ಇದಕ್ಕೆ ಉತ್ತರ ಬಂದಾಗ ನಾಳೆಯೇ ಎಲ್ಲ ಜಿಲ್ಲಾಧಿಕಾರಿಗಳಿಗೆ ಚುನಾವಣೆಯ ಪ್ರಕ್ರಿಯೆಗೆ ಚಾಲನೆ ಕೊಟ್ಟಿರುವುದನ್ನು ಕೂಡ ನಾವೆಲ್ಲರೂ ಗಮನಿಸಿದ್ದೇವೆ. ಇವತ್ತು ಡಾ: ಸಾರ್ವಭೌಮ ಬಗಲಿಯವರು ಮಾತನಾಡಿ ಇದು ಸದನದ ಹಕ್ಕುಚ್ಯುತಿಯಾಗಿದೆ, ಸದನಕ್ಕೆ ಅಗೌರವವನ್ನು ಚುನಾವಣಾ ಆಯೋಗದವರು ತೋರಿಸಿದ್ದಾರೆಂದು ಎಂದು ಹೇಳಿ ಹಕ್ಕುಚ್ಯುತಿ ಪ್ರಸ್ತಾವವನ್ನು ತಂದಾಗ ಮಾನ್ಯ ವಿರೋಧ ಪಕ್ಷದ ನಾಯಕರು, ಉಪ ನಾಯಕರು, ಮಾನ್ಯ ಪೌರಾಡಳಿತ ಸಚಿವರು, ಇತರ ಸಚಿವರುಗಳು ಮತ್ತು ಎಲ್ಲ ಗೌರವಾನ್ವಿತ ಸದಸ್ಯರುಗಳು ಮಾತನಾಡಿ ಒಕ್ಕೊರಲಿನಿಂದ ಇದು ಸದನದ ಗೌರವದ ಪ್ರಶ್ನೆಯಾಗಿದೆ ಮತ್ತು ನಮ್ಮೆಲ್ಲರ ಹಕ್ಕಿಗೆ ಚ್ಯುತಿಯಾಗಿದೆ ಎನ್ನುವಂಥ ಭಾವನೆಗಳು ಬಂದಿದೆ ಎಂದು ಹೇಳಿದ್ದಾರೆ. ಇಂಥ ಭಾವನೆಗಳು ಸರ್ಕಾರದ ಕಡೆಯಿಂದ ಮತ್ತು ಎಲ್ಲ ಮಾನ್ಯ ಸದಸ್ಯರುಗಳ ಕಡೆಯಿಂದ ಬಂದಿದೆ. ಇದು ಸಂವಿಧಾನದ ಪ್ರಶ್ನೆಯಾಗಿರುವುದರಿಂದ ಇದರ ಬಗ್ಗೆ ಇನ್ನೂ ಸ್ವಲ್ಪ ಕೂಲಂಕುಷವಾಗಿ ಪರಿಶೀಲನೆ ಮಾಡಿ ಈ ಸದನದ ಗೌರವಕ್ಕೆ ಮತ್ತು ಸದನದ ಎಲ್ಲ ಸದಸ್ಯರ ಹಕ್ಕಿಗೆ ಚ್ಯುತಿಯಾಗದ ರೀತಿಯಲ್ಲಿ ತೀರ್ಪನ್ನು ಕೊಡುವುದಕ್ಕಾಗಿ ತೀರ್ಪನ್ನು ಕಾದಿರಿಸುತ್ತೇನೆ. ಇವತ್ತು ಸಂಜೆ 5.00 ಘಂಟೆಯೊಳಗೆ ಇದಕ್ಕೆ ಸಂಬಂಧಿಸಿದಂತೆ ಎಲ್ಲವನ್ನು ಚಾಲನೆ ಕೊಡುವಂಥ ಕೆಲಸವನ್ನು ಮಾಡುತ್ತೇನೆ. ಇನ್ನು ಈ ವಿಚಾರದಲ್ಲಿ ಮಾನ್ಯ ಕಾನೂನು ಸಚಿವರು ತಮ್ಮ ಅಭಿಪ್ರಾಯವನ್ನೇನು ಮಂಡಿಸಿದ್ದಾರೆ ಅದರ ಬಗ್ಗೆಯೂ ಕೂಡ ನೋಡಿ, ನಾನು ಕೊಡಬೇಕಾದ ತೀರ್ಪನ್ನು ಈಗ ಸದ್ಯಕ್ಕೆ ಕಾದಿರಿಸಿದ್ದೇನೆ. ಮುಂದೆ ತೀರ್ಪನ್ನು ಕೊಡುತ್ತೇನೆ. ಈಗ ಸದನವನ್ನು ಮಧ್ಯಾಹ್ನ 3.00 ಘಂಟೆಗೆ ಸೇರುವಂತೆ ಮುಂದೂಡಲಾಗಿದೆ.